# ಹಂಪಿ ಟೈಮ್ಸ್
# HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 136 Issue: 136 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 28.11.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2











## ಆನಂದ ಬಾಣ




# ವಿಕಲಚೇತನರಿಗೂ ಅವಕಾಶ ಕಲ್ಪಿಸಿ

## ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ | ಸಹಾನುಭೂತಿಗಿಂತ ಸಮಾನ ಹಕ್ಕು ನೀಡಬೇಕು

**ಹಂಪಿ ಟೈಮ್ಸ್ ಹೊಸಪೇಟೆ**

ವಿಕಲಚೇತನರಿಗೆ ಸಮಾನ ಹಕ್ಕುಗಳು, ಸೌಕರ್ಯಗಳು, ಮತ್ತು ಅವಕಾಶಗಳನ್ನು ನೀಡುವುದು ನಮ್ಮೆಲ್ಲರ ಜವಾಬ್ದಾರಿ. ಅವರು ತಮ್ಮ ಬದುಕಿನಲ್ಲಿ ಸ್ವಾವಲಂಭಿಯಾಗಿಸಲು ಸರ್ಕಾರ ಮಾತ್ರವಲ್ಲದೇ ಸಂಘ-ಸಂಸ್ಥೆಗಳು, ಸಾರ್ವಜನಿಕರು ಅವರೊಂದಿಗೆ ಕೈ ಜೋಡಿಸಬೇಕು ಎಂದು ವಿಜಯನಗರ ಕ್ಷೇತ್ರದ ಶಾಸಕ ಹೆಚ್.ಆರ್.ಗವಿಯಪ್ಪ ತಿಳಿಸಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಶೇಷಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನವೆಂಬರ್ 27 ರಂದು ಹಮ್ಮಿಕೊಂಡಿದ್ದ, ವಿಕಲಚೇತನರ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕ್ರೀಡಾ ಕೂಟ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿಕಲಚೇತನರಿಗೆ ತಮ್ಮ ಪ್ರತಿಭೆಗಳನ್ನು ಅರಿಯಲು ಹಾಗೂ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಬದುಕಿನಲ್ಲಿ ಸಮರ್ಪಕವಾಗಿ ಪಾಲ್ಗೊಳ್ಳಲು ಸೂಕ್ತವಾದ ಪರಿಸರ ಕಲ್ಪಿಸಬೇಕು. ವಿಕಲಚೇತನರನ್ನು ಕೇವಲ ಸಹಾನುಭೂತಿ ದೃಷ್ಟಿಯಿಂದ ನೋಡುವುದನ್ನು ಬಿಟ್ಟು, ಅವರನ್ನು ಸಮಾನ ಹಕ್ಕುದಾರರು ಮತ್ತು ನಮ್ಮ ಸಮಾಜದ ಬಹುಮುಖ್ಯ ಅಂಗವೆಂದು ಪರಿಗಣಿಸಬೇಕು.

ವಿಕಲಚೇತನರ ಪ್ರತಿಭೆಯನ್ನು ಗುರುತಿಸಿಲು ವರ್ಷಕ್ಕೆ ಒಂದು ಭಾರಿಯಲ್ಲದೆ ಪ್ರತಿ ಮೂರು ತಿಂಗಳಿಗೊಮ್ಮೆ ಈ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅಂಗವಿಕಲ ಮಕ್ಕಳಿಗೆ ಹಾಗೂ ವಯಸ್ಕರಿಗೆ ವಿಶೇಷ ಶಿಕ್ಷಣ ಮತ್ತು ವೃತ್ತಿಪರ ತರಬೇತಿ ನೀಡುವ ಮೂಲಕ, ಅವರಲ್ಲಿ ಆತ್ಮವಿಶ್ವಾಸ ಬೆಳೆಸುತ್ತಿರುವ ಸಂಘ-ಸಂಸ್ಥೆಗಳ ಕಾರ್ಯ ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ದೈಹಿಕ ಅಂಗವಿಕಲರಿಗೆ ಗುಂಡು ಎಸೆತ, ಜಾವಲಿನ್ ಥ್ರೋ, >>4

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ

**ಈ ವಾರದ ವಿಷಯ**

1) ಮಾನವನ ಮಿದುಳಿನ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ?

ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ 10 ನಿಮಿಷದೊಳಗೆ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿಯೊಂದಿಗೆ ವಾಟ್ಸಪ್ ನಂಬರ್: 9972603099 ಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ಕಳುಹಿಸಬಹುದು.

ಆಯ್ಕೆಯಾದ ಅತ್ಯುತ್ತಮ ಚಿತ್ರವನ್ನು ಭಾನುವಾರ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು

## ಕೊಪ್ಪಳದಲ್ಲಿ ಸಿರಿಧಾನ್ಯ ಜಾಗೃತಿ ನಡಿಗೆಗೆ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿ ಚಾಲನೆ

ವಿವರ >>4



## ಜಿಲ್ಲಾಮಟ್ಟದ ಯುವಜನೋತ್ಸವ ಡಿ.4 ಕ್ಕೆ ಮುಂದೂಡಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ನ. 29 ರಂದು ನಿಗದಿಯಾಗಿದ್ದ 2024-25ನೇ ಸಾಲಿನ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಕಾರಣಾಂತರಗಳಿಂದ ಡಿ. 4 ಕ್ಕೆ ಮುಂದೂಡಲಾಗಿದೆ ಎಂದು ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.




## ಸ್ಟುಡೆಂಟ್ ಕಾಲಂ

# ಮೂಢನಂಬಿಕೆ



ಒಂದು ಹಳ್ಳಿ ಇದ್ದಿತು. ಆ ಹಳ್ಳಿಯಲ್ಲಿ ಸುಮಾರು 80 ರಿಂದ 100 ಮನೆಗಳಿದ್ದವು. ಹಳ್ಳಿಯ ಜನರು ತುಂಬಾ ಮುಗ್ಧರಾಗಿದ್ದರು. ಆ ಹಳ್ಳಿಯಲ್ಲಿ ಒಂದು ಸಮಸ್ಯೆ ಇತ್ತು. ಏನೆಂದರೆ ಮಧ್ಯ ರಾತ್ರಿ ಆದರೆ ಸಾಕು ದೆವ್ವದ ರೀತಿಯಲ್ಲಿ ಕೂಗಾಟ, ಕಿರುಚಾಟ ದಿನಂಪ್ರತಿ ಕೇಳಿಸುತ್ತಿತ್ತು. ಊರಿನಲ್ಲಿ ಎಲ್ಲೆಂದರಲ್ಲಿ ನಿಂಬೆಹಣ್ಣು ಮಾಟ ಮಂತ್ರ ಮಾಡುವ ಸಾಮಾನುಗಳು ಕಾಣಿಸುತ್ತಿದ್ದವು. ಆ ಹಳ್ಳಿಯ ಜನ ತುಂಬಾ ಭಯಭೀತರಾಗಿದ್ದರು. ಆದ್ದರಿಂದ ಅಲ್ಲಿನ ಜನರು ಒಬ್ಬೊಬ್ಬರಾಗಿ ಊರು ಬಿಟ್ಟು ವಲಸೆ ಹೊರಟರು.

ಇದನ್ನು ಗಮನಿಸಿದ ಊರಿನ ಕೆಲ ವಿದ್ಯಾವಂತ ಯುವಕರು ಒಂದು ದಿನ ದೆವ್ವಗಳ ಕಿರುಚಾಟ ಕೂಗಾಟ ನೋಡಬೇಕೆಂದು ನಿರ್ಧರಿಸಿದರು. ಅದರಂತೆ ರಾತ್ರಿ ಯುವಕರು ಊರ ಹೊರಗೆ ಆ ದೆವ್ವಗಳನ್ನು ನೋಡಿಯೇ ಬಿಟ್ಟರು. ಅಲ್ಲಿ ನಡೆದ ಆಶ್ಚರ್ಯವೇನೆಂದರೆ ಊರಿನ ಕಳ್ಳರ ಗುಂಪೊಂದು ಸೇರಿಕೊಂಡು ದೆವ್ವದ ಹಾಗೆ ಕೂಗಾಡುತ್ತಿದ್ದರು.



ಜನರಿಗೆ ಭಯಭೀತಗೊಳಿಸಿ ಕಳ್ಳತನ ಮಾಡುತ್ತಿದ್ದರು. ಅಲ್ಲಿನ ಯುವಕರ ಗುಂಪು ಕಳ್ಳರನ್ನು ಹೊಡೆದೋಡಿಸಿದರು. ಆ ಯುವಕರ ಗುಂಪು ಒಂದು ವೇಳೆ ಕಳ್ಳರ ಗುಂಪನ್ನು ಕಂಡುಹಿಡಿಯದಿದ್ದರೆ ಇಡೀ ಊರಿಗೆ ಊರೇ ಮೂಢನಂಬಿಕೆಗೆ ಬಲಿಯಾಗಬೇಕಾಗಿತ್ತು. ಅಂದಿನಿಂದ ಆ ಹಳ್ಳಿಯ ಅಕ್ಷರಸ್ಥ ಯುವಕರ ಗುಂಪು ಜನರಲ್ಲಿ ಜಾಗೃತಿ ಮೂಡಿಸಿ ವಲಸೆ ಹೋಗುವುದನ್ನು ತಪ್ಪಿಸಿದರು. ಆದ್ದರಿಂದ ಇಲ್ಲಿ ತಿಳಿಯಬಹುದೇ ನಂದರೆ ಈ ಪ್ರಪಂಚದಲ್ಲಿ ಯಾರು ಮೂಢನಂಬಿಕೆಗಳನ್ನು ನಂಬಬೇಡಿ. ಮೂಢನಂಬಿಕೆಗಳಿಂದ ಮಾನಸಿಕ ಖಿನ್ನತೆಗೆ ಬಲಿಯಾಗಬಹುದು. ಶಿಕ್ಷಣವನ್ನು ಪಡೆದು ಅಕ್ಷರಸ್ಥರಾಗೋಣ.

**– ರಮೇಶ.ಕೆ. 10ನೇ ತರಗತಿ**

**ಸರಕಾರಿ ಪ್ರೌಢಶಾಲೆ, ಸೂಲದಹಳ್ಳಿ. ಕೂಡ್ಲಿಗಿ(ತಾ), ವಿಜಯನಗರ (ಜಿ)**

## ಪ್ರೀತಿಯ ವಿದ್ಯಾರ್ಥಿಗಳೇ ನಿವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.

ಇ-ಮೇಲ್:hampitimes@gmail.com

M: 94486 33038

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.


– ಜಾಹೀರಾತು ವ್ಯವಸ್ಥಾಪಕರು.

# ಭಗ್ನಗೊಂಡ ಕಾರಿಡಾರು

ಶಬನಂ ವೀರಮಾನ್ವಿಯವರು ಕಬೀರನ ಮೇಲೆ ಒಂದು ಸಾಕ್ಷ್ಯಚಿತ್ರ ತಯಾರಿಸಿದ್ದಾರೆ. ಅದರ ಹೆಸರು 'ಹದ್-ಅನಹದ್'. ಇದನ್ನು ಸೀಮೆ-ಸೀಮೋಲ್ಲಂಘನೆ ಎಂದೂ ಕರೆಯಬಹುದು. ಅವರು ಕಬೀರನು ಹುಟ್ಟಿ-ಬೆಳೆದ ಬನಾರಸ್ ಮತ್ತು ಅವನ ಸಮಾಧಿಯಿರುವ ಗೋರಖಪುರದಿಂದ ಪಯಣ ಆರಂಭಿಸಿ, ಸಿಂಧ್, ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶ ಮುಂತಾದೆಡೆ ಇರುವ ಕಬೀರ ಪರಂಪರೆಯನ್ನು ಗುರುತಿಸುತ್ತ ಹೋಗುತ್ತಾರೆ. ಆಗ ಅವರು ಶೋಧಿಸಿದ ಇಬ್ಬರು ಕಬೀರ್ ಗಾಯಕರೆಂದರೆ ರಾಜಸ್ಥಾನದ ಮುಖ್ತಿಯಾರ್ ಅಲಿ ಮತ್ತು ಮಧ್ಯಪ್ರದೇಶದ ಪ್ರಹ್ಲಾದ್ ತಿಪಾನಿಯಾ. (ಶಬನಂ ಕರ್ನಾಟಕಕ್ಕೆ ಬಂದಿದ್ದರೆ ಅವರಿಗೆ ಕಾಶ್ಮೀರದಿಂದ ಕನ್ಯಾಕುಮಾರಿ ತನಕ ತಿರುಗಾಟ ಮಾಡಿದ ಸಿದ್ಧಾರೂಢರ ಶಿಷ್ಯ ಕಬೀರದಾಸರು ಇರುವುದು ತಿಳಿಯುತ್ತಿತ್ತು. ) ಶಬನಂ ಭಾರತದ ರಾಜಕೀಯ ಗಡಿಯನ್ನು ದಾಟಿ ಲಾಹೋರ್ ಮತ್ತು ಕರಾಚಿಗೆ ಹೋಗುತ್ತಾರೆ. ಅಲ್ಲಿನ ಖವಾಲರು, ಮುಖ್ಯವಾಗಿ ಫರೀದ್ ಅಯಾಜರ ಮನೆತನ ಕಬೀರನ ರಚನೆಗಳನ್ನು ತಲೆಮಾರುಗಳಿಂದ ಹಾಡುತ್ತಿರುವುದನ್ನು ದಾಖಲಿಸುತ್ತಾರೆ. ವಿಶ್ವಮಾನವತಾ ಗುಣವುಳ್ಳ ಅನುಭಾವತತ್ವವು ಪ್ರಾಂತ್ಯದ ದೇಶದ ಭಾಷೆಯ ಧರ್ಮದ ಗಡಿಗಳನ್ನು ಮೀರಿ ಪರಿಭ್ರಮಣ ಮಾಡುವುದನ್ನು ಕಾಣಿಸುತ್ತಾರೆ.



ಇಂತಹುದೇ ನಾಥರ ಪರಿಭ್ರಮಣದ ಪಥವನ್ನು ಬ್ರಿಗ್ಸ್ (1934) ಕೂಡ ಗುರುತಿಸುತ್ತಾನೆ. ಅವನು ಭೇಟಿಮಾಡಿದ ಒಬ್ಬ ನಾಥಯೋಗಿ, ಟಿಬೆಟ್ ಚೀನಾ ಆಫಘಾನಿಸ್ಥಾನ ಇರಾನ್ ಅಝುರಬೈಜನ್ ತನಕ ನಡಿಗೆಯಲ್ಲಿ ತಿರುಗಾಟ ಮಾಡಿರುವುದನ್ನು ದಾಖಲಿಸುತ್ತಾನೆ. ಮಂಗಳೂರಿನ ಕದ್ರಿಗುಡಿಯಲ್ಲಿರುವ ಗೋರಖ ಮೂರ್ತಿಯು ನಿಂತಭಂಗಿಯಲ್ಲಿಲ್ಲ. ನಡೆಯುತ್ತಿರುವ ಕ್ರಮದಲ್ಲಿದೆ. ಈ ಬಗೆಯ ವಿಶ್ವಾತ್ಮಕ ತಿರುಗಾಟವನ್ನು ಸೂಫಿಗಳಲ್ಲಿ ಬೌದ್ಧಭಿಕ್ಕು ಜೈನಯತಿಗಳಲ್ಲಿ ಕೂಡ ಕಾಣಬಹುದು. ವಡ್ಡಾರಾಧನೆಯ ಕತೆಗಳೇ ಇದಕ್ಕೆ ಸಾಕ್ಷಿ. ಗಂಗಾ-ಯಮುನಾ ಬಯಲಿನ ವಿಶಾಲ ಹರಹಿನಲ್ಲಿ ಬುದ್ಧ ತಿರುಗಾಡಿದನು. ಹ್ಯೂಯನ್ ತ್ಸಾಂಗನ ಜೀವನಚರಿತ್ರೆ ಅವನ ಮಹಾಪಯಣದ ಕಥನದಿಂದ ಕೂಡಿದೆ. ಮಂಟೆಸ್ವಾಮಿ ಕಥನವು ಆತನು ಉತ್ತರದೇಶದಿಂದ ಕತ್ತಲ ದೇಶಕ್ಕೆ ಮಾಡಿದ ಕಥನವಾಗಿದೆ. ನಮ್ಮ ಹೊಸಪೇಟೆಯ ಪ್ರಸಿದ್ಧ ಸೂಫಿಸಂತ ಮೀರಾಲಂ ನವಾಜ್, 19ನೇ ಶತಮಾನದಲ್ಲಿ ಸಿಂಧ್ ನದಿಯ ದಡದಿಂದ ಗುಜರಾತ್ ಮಹಾರಾಷ್ಟ್ರಗಳ ಮೂಲಕ ಬಳ್ಳಾರಿ ಸೀಮೆಗೆ ಬಂದವನು. ಶ್ರಮಣ ವಿರಕ್ತ ಧರ್ಮಗಳನ್ನು ತಿರುಗಾಟವಿಲ್ಲದೆ ಕಲ್ಪಿಸಲಾಗದು. ದಕ್ಷಿಣಭಾರತದ ದಾರ್ಶನಿಕರು, ಶ್ರೀಶೈಲಕ್ಕೆ ಹೋಗುವ ಪ್ರಸಂಗಗಳನ್ನು ಇಲ್ಲಿಯೇ ಉಲ್ಲೇಖಿಸಬೇಕು. ಶೂನ್ಯಸಂಪಾದನೆಯ ಕೊನೆಯ ಚಿತ್ರ, ಅಲ್ಲಮನು ಇಡೀ ನಾಡನ್ನು ಸುತ್ತಿ ಕಲ್ಯಾಣಕ್ಕೆ ಬರುವ ಪ್ರಸಂಗದಿಂದ ಕೂಡಿದೆ. ಪಶುಗಳಿಗೆ ಹುಲ್ಲು ನೀರು ಇರುವೆಡೆ ಪಶುಪಾಲಕರು ಹೋಗುವುದಕ್ಕೂ ಜ್ಞಾನ ಅನುಭಾವ ತಕ್ಕಗುರು ಇರುವ ಕಡೆ ಉಪಾಸಕರು ಹುಡುಕಿಹೋಗುವುದಕ್ಕೂ , ತಮ್ಮ ವಸ್ತುಗಳಿಗೆ ಬೇಡಿಕೆ ಇರುವ ಗ್ರಾಹಕರನ್ನು ಹುಡುಕಿ ವ್ಯಾಪಾರಿಗಳು ತಿರುಗುವುದಕ್ಕೂ ಸಾಮ್ಯಗಳಿವೆ.



ಸಂತರನ್ನು ಬಿಟ್ಟರೆ, ಹೀಗೆ ಗಡಿಮೀರುವ ತಿರುಗಾಟ ಮಾಡಿದವರು ಪ್ರವಾಸಿಗಳು, ವ್ಯಾಪಾರಿಗಳು, ಸೈನಿಕರು ಹಾಗೂ ಪಶುಪಾಲಕರು. ಎಚ್.ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳನ್ನು ಓದುವಾಗ, ವ್ಯಾಪಾರಿಗಳು ಪಾದ್ರಿಗಳು ಅಧಿಕಾರಿಗಳು ಮಾಡಿರುವ ತಿರುಗಾಟ ಮೈ ಜುಮ್ಮೆನುತ್ತದೆ. ಈ ತಿರುಗಾಟ ಪ್ರಾಣಾಂತಿಕವಾಗಿತ್ತು. ಕಾಯಿಲೆ ಪ್ರವಾಹ ದರೋಡೆಕೋರರು, ಕಡಲುಗಳ್ಳರು, ಸೈನಿಕರು ಕಾಡು ಜಂತುಗಳು ಯಾವಾಗಲಾದರೂ ಪ್ರಾಣಕ್ಕೆ ಸಂಚಕಾರ ತರಬಹುದಿತ್ತು. ಕೆಲವರು ಮರಳಿ ತಮ್ಮೂರಿಗೆ ಹೋಗಲೂ ಇಲ್ಲ. ನಡುವೆಯೇ ಮರಣಿಸಿದರು. ಸಂತರ, ಸೈನಿಕರ, ವ್ಯಾಪಾರಿಗಳ ಹಾಡುಗಾರರ ಈ ಸುತ್ತಾಟದ ಫಲವಾಗಿ, ಜಗತ್ತಿನ ಒಂದೆಡೆಯಿದ್ದ ವಿಚಾರ ಧರ್ಮ ಸಂಸ್ಕೃತಿ ಭಾಷೆ ಚಿಂತನೆ ಅನುಭಾವ ತಂತ್ರಜ್ಞಾನ ಬೆಳೆ ಹಣ್ಣು ತರಕಾರಿಗಳು ಇನ್ನೊಂದೆಡೆಗೆ ಪಯಣಿಸಿದವು. ಭಾರತದ ಚಹ, ರೇಷ್ಮೆ (ಚೀನಾಂಬರ), ಸಕ್ಕರೆ (ಚೀನಿ) ಪಿಂಗಾಣಿಗಳು ಚೀನಾದಿಂದ ಬಂದವು.



ರಹಮತ್ ತರೀಕೆರೆ

ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful

HAMPI TIMES E-paper



ವ್ಯಾಪಾರಿಗಳ ಕಥನವಾದ ವಡ್ಡಾರಾಧನೆಯಲ್ಲಿ ಚೀನಾಂಬರದ ಮತ್ತು ದ್ರಮ್ಮದ (ಅರಬ್ ಕರನ್ಸಿ ದಿರಹಾಂ) ಉಲ್ಲೇಖ ಬರುತ್ತದೆ. ಆದರೆ ಸೈನಿಕರ ವ್ಯಾಪಾರಿಗಳ ತಿರುಗಾಟದ ಫಲವಾಗಿ ಹೊಸ ವಸ್ತು ವಿಚಾರ ಭಾಷೆಗಳ ಜತೆ ರಾಜಕೀಯ ಗುಲಾಮಗಿರಿಯೂ ಆಫ್ರಿಕಾ ಏಶಿಯಾಗಳಿಗೆ ಬಂದಿತು. ಅದು ಬೇರೆಯದೇ ಚರಿತ್ರೆ.

ಸಂತರ, ವ್ಯಾಪಾರಿಗಳ, ಸೈನಿಕರ, ಪ್ರವಾಸಿಗರ ತಿರುಗಾಟದ ಕಥನವು, ಅವರು ಅಕ್ಷರಸ್ಥರಾಗಿದ್ದರಿಂದ ದಾಖಲಾಗಿದೆ. ದಾಖಲಾಗದೆ ಇರುವುದು ಪಶುಪಾಲಕರ ತಿರುಗಾಟ. ಇವರ ತಿರುಗಾಟದ ಪಥವನ್ನು ಕೆಲವು ವಿದ್ವಾಂಸರು ದಾಖಲಿಸಿದರು. ಕನ್ನಡ ಮಾತಾಡುವ ಕುರಿಗಾಹಿಗಳ ಪಥವನ್ನು ಮೈಲಾರಲಿಂಗ ಖಂಡೋಬ ಎಂಬ ದೈವಗಳ ಪರಂಪರೆಯನ್ನು ಅಧ್ಯಯನ ಮಾಡಿದ ಶಂಬಾ ದಾಖಲಿಸಿದ್ದಾರೆ. ಈ ಕುರಿಗಾಹಿಗಳು ಚಿತ್ರದುರ್ಗ ತುಮಕೂರು ಬಳ್ಳಾರಿ ಅನಂತಪುರ ಕರ್ನೂಲು ಮಹಬೂಬನಗರ ಲಾತೂರು ಸೊಲ್ಲಾಪುರ ಅಹಮದನಗರ ನಾಸಿಕ ಪುಣೆ ಕೊಲ್ಹಾಪುರ ಬೆಳಗಾವಿ ಧಾರವಾಡ ಹಾವೇರಿ ಹೀಗೆ ದೊಡ್ಡದೊಂದು ವರ್ತುಲದಲ್ಲಿ ತಿರುಗಾಡುತ್ತಾರೆ. ಇವರ ದೈವಗಳಿರುವ ಮೈಲಾರ ಜೆಜೂರಿ ಚಿಂಚಲಿ ಈ ವರ್ತುಲದಲ್ಲಿವೆ. ಹುಲ್ಲುನೀರು ಹುಡುಕಿಕೊಂಡು ತಿರುಗುವ ಇವರು ಸಂಸ್ಕೃತಿ ಪ್ರಸಾರಕರೂ ಹೌದು. ನಾಸಿಕದಲ್ಲಿರುವ ಮರಾಠಿಗರು ತುಪ್ಪಕ್ಕೆ ತೂಪ್ ಎಂದು ಹೇಳುವುದಕ್ಕೆ ಕಾರಣ, ಕನ್ನಡ ಮನೆಮಾತಿನ ಪಶುಪಾಲಕರು ಎಂದು ಶಂಬಾ ಹೇಳುತ್ತಾರೆ. ಪಶುಪಾಲಕರ ತಿರುಗಾಟ ದೈವ ಭಾಷೆಗಳ ಮೇಲೆ ಜರ್ಮನಿಯ ಸೊಂಥೈಮರ್ ತಮ್ಮ 'ಪ್ಯಾಸ್ಚುರಲ್ ಡೈಟೀಸ್ ಆಫ್ ವೆಸ್ಟರನ್ ಇಂಡಿಯಾ' ಕೃತಿಯಲ್ಲಿ ಬರೆಯುತ್ತಾರೆ.

ಇಂಥದೇ ತಿರುಗಾಟದ ಪಥಗಳನ್ನು ಮಧ್ಯ ಏಶಿಯಾದ ಮರುಭೂಮಿ ವಾಸಿಗಳಾದ ಬೆದೋವಿನರೂ ಮಾಡಿರುವರು. ಇವರ ಗುಡಾರಗಳನ್ನು ನಾನು ಪ್ಯಾಲೆಸ್ತೇನ್ ಈಜಿಪ್ತ ಜೋರ್ಡಾನ್ ಸೌದಿ ಅರೇಬಿಯಾದಲ್ಲಿ ನೋಡಿದೆ. ಒಂಟೆ ಕುರಿಗಳನ್ನು ಮೇಯಿಸುತ್ತ ಇವರು ಮಧ್ಯ ಏಶಿಯಾದ ವಿಶಾಲವಾದ ಮರಳುಗಾಡಿನಲ್ಲಿ ತಿರುಗುವರು. ಒಂದು ಕಾಲಕ್ಕೆ ಇವರಿಗೆ ದೇಶದ ಗಡಿಗಳೇ ಇರಲಿಲ್ಲ. ಇಂತಹುದೇ ಇನ್ನೊಂದು ಸಮುದಾಯ ಕಾಶ್ಮೀರದ ಬಕ್ರಿವಾಲಾಗಳು. ಇವರನ್ನು ಉತ್ತರಕಾಶಿ ಜಿಲ್ಲೆಯ ಹಿಮಾಲಯ ಪರ್ವತಗಳಲ್ಲಿ ನಾವು ಭೇಟಿ ಮಾಡಿದೆವು. ಇವರು ಕುರಿ ಮೇಕೆ ಎಮ್ಮೆ ಕಾಯುತ್ತ ದಟ್ಟಾರಣ್ಯದಲ್ಲಿದ್ದರು. ಒಂದು ಕಾಲಕ್ಕೆ ಬಕ್ರಿವಾಲಾಗಳು ಚೀನಾ ಟಿಬೆಟ್ ಉಜ್ಬೆಕಿಸ್ತಾನ್ ಆಫಘಾನಿಸ್ತಾನ ಪಾಕಿಸ್ತಾನ ಭಾರತದ ಗಡಿಗಳೆಲ್ಲವೂ ಸೇರುವ ಹಿಮಾಲಯ ಸೀಮೆಯಲ್ಲಿ ಶತಮಾನಗಳಿಂದ ಹರಿದಾಡುತ್ತ ಇದ್ದವರು. ಈಗ ಬೆದೋವಿನರ ಮತ್ತು ಬಕ್ರಿವಾಲಾಗಳ ತಿರುಗಾಟದ ಪಥವನ್ನು ಆಧುನಿಕ ರಾಷ್ಟ್ರಗಳ ಗಡಿಗಳು ನಿರ್ಬಂಧಿಸಿವೆ. ಇದು ಆಧುನಿಕ ನಾಗರಿಕ ಸಮಾಜವು ಕಟ್ಟಿಕೊಂಡ ನಗರ ಡ್ಯಾಮುಗಳಿಂದ; ಮಾಡಿದ ಹೊಲ ತೋಟ ಎಸ್ಟೇಟುಗಳಿಂದ ಆನೆ ಹುಲಿಗಳ ಪಾರಂಪರಿಕ ಕಾರಿಡಾರುಗಳು ತುಂಡಾದ ಹಾಗೆ. ಯೂರೋಪಿನ ಜಿಪ್ಸಿಗಳದ್ದೂ ಇದೇ ಪಾಡು.

ಹಿಂದೂಸ್ತಾನಿ ಸಂಗೀತಗಾರರಲ್ಲೂ ಈ ಬಗೆಯ ಪರಿಭ್ರಮಣೆಗಳಿವೆ. ಉತ್ತರದ ಅಬ್ದುಲ್ ಕರೀಂಖಾನರು ದಖನ್ನಿಗೆ ಬಂದರೆ, ಕನ್ನಡಿಗ ಕುಮಾರಗಂಧರ್ವ ಮಧ್ಯಪ್ರದೇಶದ ದೇವಾಸಕ್ಕೆ ವಲಸೆ ಹೋದರು. ಹಿಂದೂಸ್ತಾನಿ ರಾಗಗಳೂ ಹೀಗೆ ಸಂಗೀತಗಾರರ ತಿರುಗಾಟ ಮತ್ತು ವಲಸೆಗಳಿಂದ ರೂಪುಗೊಂಡವು. ಏಕೀಕೃತ ಭಾರತವಿದ್ದಾಗ ಲಾಹೋರ್ ಕರಾಚಿ ಸಿಂಧ್ ರಾಜಸ್ಥಾನ ಗುಜರಾತ್ ಮಧ್ಯಪ್ರದೇಶಗಳ ವಿಸ್ತಾರ ಬಯಲಿನಲ್ಲಿ ಹಾಡುತ್ತ ತಿರುಗುತ್ತಿದ್ದ ಮಿರಾಶಿ/ಧಾಡಿ ಜನಪದ ಗಾಯಕರಿಗೂ ದೇಶವಿಭಜನೆ ಛಿದ್ರಗೊಳಿಸಿತು. ಜನಪದ ಗಾಯಕಿ ಸಲ್ಮಾ, ಗಝಲ್ ಗಾಯಕ ಮೆಹದಿ ಹಸನ್, ದೇಶವಿಭಜನೆ ಕಾಲಕ್ಕೆ ರಾಜಸ್ಥಾನದಿಂದ ವಲಸೆ ಹೋದವರು. ಹೀಗೆ ಚರಿತ್ರೆಯ ನಾನಾ ಕಾರಣಕ್ಕೆ ಹರಿದುಹಂಚಿಹೋದ ಅಲೆಮಾರಿ ಸಮುದಾಯಗಳು, ಕೂಡುವ ಕೊಂಡಿಗಳನ್ನು ಅರಸುವುದುಂಟು. ಇದನ್ನು ಮುಖ್ತಿಯಾರ್ ಅಲಿಯವರ ಸಂದರ್ಶನ ಮಾಡುವಾಗ ನನಗೆ ಭಾಸವಾಯಿತು. ಸಮುದಾಯಗಳ ಹಾಗೆಯೇ ಹಾಡುಪರಂಪರೆಯ ಕೊಂಡಿಗಳು ಮಿಲನವಾಗಲು ಹಾತೊರೆಯುತ್ತಿರುತ್ತವೆ. ಅಂತಹ ಒಂದು ಕಬೀರ್ ಹಾಡುಗಾರರ ಕೊಂಡಿಯನ್ನು ಶಬನಂ ಅವರು ಹದ್-ಅನಹದ್ ಡಾಕ್ಯುಮೆಂಟರಿಯಲ್ಲಿ ಅದ್ಭುತವಾಗಿ ಕಾಣಿಸುತ್ತಾರೆ.

# ಸಂತೃಪ್ತ ಜೀವನ

■ **ಜಯಶ್ರೀ.ಎಂ. ಕರ್ಜಗಿ. ಹುಬ್ಬಳ್ಳಿ**



ಶ್ರೀಧರ ಒಂದು ಒಳ್ಳೆಯ ಕೆಲಸದಲ್ಲಿ ಇದ್ದ. ಆದರೆ ಕೆಲಸದಲ್ಲಿ ಆಸಕ್ತಿ ಇರಲಿಲ್ಲ. ಒಂದು ದಿನ ಕೆಲಸಕ್ಕೆ ಹೋಗುವ ವೇಳೆ ಚಿಕ್ಕ ಅಪಘಾತವಾಗಿ ಕಣ್ಣಿಗೆ ಸ್ವಲ್ಪ ಪೆಟ್ಟಾಯಿತು. ಡಾಕ್ಟರ್ ಹತ್ತಿರ ಹೋದ. ಪರೀಕ್ಷಿದ ನಂತರ ಡಾಕ್ಟರ್ 'ಕಣ್ಣಿಗೆ ಏನೂ ತೊಂದರೆಯಾಗಿಲ್ಲ, ಒಂದೆರಡು ದಿನ ಈ ಔಷಧಿ ಹಾಕಿಕೊಳ್ಳಿ' ಎಂದು ಒಂದು ಕಣ್ಣಿಗೆ ಹಾಕಲು ಔಷಧಿ ಬರೆದುಕೊಟ್ಟರು.

ಔಷಧಿ ಕೊಳ್ಳಲು ಮೆಡಿಕಲ್ ಶಾಪ್‌ಗೆ ಹೋದಾಗ ಒಬ್ಬ ಆಟೋ ಡ್ರೈವರ್ ಔಷಧಿ ಕೊಳ್ಳುತ್ತಿದ್ದ. ಅವನ ಚೀಟಿಯಲ್ಲಿ ಎರಡು ಔಷಧ ಬರೆದಿದ್ದರು. ಅವನ ಹತ್ತಿರ ಎರಡು ಔಷಧಿ ಕೊಳ್ಳಲು ಹಣ ಇರಲಿಲ್ಲ. ಅದಕ್ಕೆ ಒಂದು ಔಷಧಿ ಕೊಡಲು ಕೇಳಿದನು. ಅದಕ್ಕೆ ಅಂಗಡಿಯವನು 'ಒಂದು ಔಷಧಿ ತಗೊಂಡರೆ ಉಪಯೋಗ ಇಲ್ಲ. ಎರಡೂ ಔಷಧಿಗಳನ್ನು ಒಟ್ಟಿಗೆ ಹಾಕಬೇಕು' ಎಂದನು. 'ನನ್ನ ಬಳಿ ಕೇವಲ ನೂರು ರೂಪಾಯಿ ಮಾತ್ರ ಇದೆ. ಹಾಗಾಗಿ ಒಂದೇ ಕೊಡಿ' ಎಂದನು. ಅದಕ್ಕೆ ಅಂಗಡಿಯವನು 'ಪರವಾಗಿಲ್ಲ, ಈಗ ಎಷ್ಟಿದೆಯೋ ಅಷ್ಟು ಕೊಡಿ. ಉಳಿದ ಹಣವನ್ನು ನಾಳೆ ಕೊಡಿ' ಎಂದು ಎರಡು ಔಷಧಿ ಕೊಟ್ಟನು. 'ನಾಳೆ ನನ್ನ ಬಳಿ ಹಣ ಇರುತ್ತೋ ಇಲ್ಲವೋ ಗೊತ್ತಿಲ್ಲ' ಎಂದನು ಆಟೋ ಡ್ರೈವರ್. ನಿನ್ನ ಬಳಿ ಇದ್ದಾಗ ತಂದುಕೊಡು ಎಂದು ಹೇಳಿ ಅಂಗಡಿಯವನು ಎರಡೂ ಔಷಧಿ ಕೊಟ್ಟುಕಳಿಸಿದ.

## ಬೆಳಕಿನ ಹಾದಿ


ಇದನ್ನೆಲ್ಲಾ ಮೂಕ ಪ್ರೇಕ್ಷಕನಂತೆ ನೋಡುತ್ತಾ ನಿಂತಿದ್ದ ಶ್ರೀಧರನಿಗೆ ಅಂಗಡಿಯವನ ಮಾನವೀಯತೆ ಕಂಡು ಖುಷಿಯಾಯಿತು. ಹಾಗೆಯೇ ತನ್ನ ಬಗ್ಗೆ ಬೇಸರವೂ ಆಯಿತು. ಒಳ್ಳೆಯ ಕೆಲಸ ಇದ್ದರೂ ಮನಸ್ಸು ಕೊಟ್ಟು ಕೆಲಸ ಮಾಡುತ್ತಿಲ್ಲ ಎಂಬ ಕೊರಗು ಅವನನ್ನು ಕಾಡಿತು. ಆರೋಗ್ಯ ಸರಿ ಇಲ್ಲ ಅಂದರೂ, ತಾನು ಕೆಲಸಕ್ಕೆ ಹೋಗದಿದ್ದರೂ ನನ್ನ ಬಳಿ ಹಣ ಇದೆ. ಆಗ ಆಟೋ ಡ್ರೈವರ್‌ನನ್ನು ನೆನಪಿಸಿಕೊಂಡು ಮುಜುಗರ ಪಟ್ಟುಕೊಂಡ. ತನ್ನ ಬಗ್ಗೆ ತನಗೆ ಬೇಸರಗೊಂಡ.

ನೆರಳಿನ ಮಹತ್ವ ಬಿಸಿಲಿನಲ್ಲಿಯೇ ತಿಳಿಯುವುದು. ಬೆಳಕಿನ ಮಹತ್ವ ಕತ್ತಲಿದ್ದಾಗಲೇ ಗೊತ್ತಾಗುವುದು. ಹೊಸ ಚಪ್ಪಲಿ ಬೇಕೆಂದು ಜಗಳ ಮಾಡುತ್ತಿದ್ದ ಹುಡುಗ ಕಾಲು ಇಲ್ಲದವನನ್ನು ನೋಡಿ ಸಮಾದಾನ ಮಾಡಿಕೊಂಡ ಹಾಗೆ ಸ್ವಂತ ಮನೆಯಲ್ಲಿರುವವರಿಗೆ ಬಾಡಿಗೆ ಮನೆಯಲ್ಲಿರುವವರ ಕಷ್ಟ ಗೊತ್ತಾಗಲ್ಲ. ಎಷ್ಟೋ ಜನ ಇರಲು ಒಂದು ಸೂರು ಇಲ್ಲದೇ ಫೂಟ್‌ಪಾತ್ ಮೇಲೆ ಜೀವನ ಮಾಡುತ್ತಾರೆ. ಹೊತ್ತೊತ್ತಿಗೂ ಹೊಟ್ಟೆ ತುಂಬ ಊಟ, ಆದಾಯ ನೀಡುವ ಉದ್ಯೋಗ ನಿಮ್ಮದಾಗಿದ್ದರೆ, ಮನೆಯಲ್ಲಿ ಎಲ್ಲ ಅನುಕೂಲಗಳಿದ್ದರೆ ಸಂತೋಷ ಪಡಿ. ನಿಮ್ಮ ಮೇಲೆ ಪ್ರೀತಿ ತೋರಿಸಲು, ನಿಮ್ಮ ಕಷ್ಟಗಳಿಗೆ ಸಮಾದಾನ ಮಾಡಲು ಅಕ್ಕರೆಯ ಮನುಷ್ಯರು ನಿಮ್ಮ ಜೊತೆಗಿದ್ದರೆ ಇದಕ್ಕಿಂದ ಖುಷಿಪಡೋಕೆ ಬೇರೆ ಏನಿದೆ. ಮನುಷ್ಯನ ಆಸೆಗೆ ಕೊನೆಯೇ ಇಲ್ಲ. ಎಷ್ಟಿದ್ದರೂ ಇನ್ನೂ ಬೇಕೆನ್ನುವ ಪ್ರಾಣಿ ಯಾವುದು ಎಂದರೆ ಅದು ಮನುಷ್ಯ ಮಾತ್ರ. ನಮಗಿಂತ ಕೆಳಗೆ ಇರುವವರನ್ನು ನೋಡಿ ನಾವು ಚೆನ್ನಾಗಿದ್ದೇವೆ ಎಂದುಕೊಂಡರೆ ನಮ್ಮಷ್ಟು ಪರಮಸುಖಿ ಬೇರೆ ಯಾರೂ ಇಲ್ಲ. ಇಷ್ಟೊಂದು ಉತ್ತಮ ಜೀವನ ಕೊಟ್ಟಿದ್ದಕ್ಕೆ ದೇವರಿಗೆ ಶ್ರೀಧರ ಕೃತಜ್ಞತೆಗಳನ್ನು ಸಲ್ಲಿಸಿದ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಉತ್ಸವ



ನದಿಯಲಿ ನೀರಿನ ಅಲೆಗಳ ಸೀಳುತ
ಸಾಗಿದೆ ದೋಣಿಯು ಸೊಗಸಾಗಿ
ದೋಣಿಯ ವೇಗಕೆ ಸಿಲುಕಿದ ತೆರೆಗಳು
ಸರಿದಿವೆ ಇಕ್ಕಡೆ ಪಾಲಾಗಿ

ಊರಿನ ದೇಗಲ ವಾರ್ಷಿಕ ಜಾತ್ರೆಯು
ನಡೆದಿದೆ ಸಡಗರ ಸಂಭ್ರಮದಿ
ಜಾತ್ರೆಯ ಅಂಗವು ತೆಪ್ಪದ ಉತ್ಸವ
ನಡೆದಿದೆ ಭಕ್ತರ ಸಮ್ಮುಖದಿ

ಹೂವಿನ ಹಾರವ ಹಾಕಿದೆ ದೋಣಿಗೆ
ಬಾವುಟ ಒಂದು ತುದಿಯಲ್ಲಿ
ಕೇಸರಿ ಬಣ್ಣದ ಛತ್ರಿಯು ಬದಿಯಲಿ
ಮಿಂಚುವ ಸಾಧನ ಅದರಲ್ಲಿ

ಭಕ್ತರ ಜೊತೆಯಲಿ ಅಂಬಿಗನಿರುವನೆ
ಎಲ್ಲಿಹನಾತನು ಕಾಣಿಸದೆ
ಹುಟ್ಟನು ಹಾಕುವ ಕರಗಳು ಹಲವಿವೆ
ಎಲ್ಲರು ಅಂಬಿಗರಿರಬಹುದೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ ಕಾರ್ಯಕ್ರಮದಲ್ಲಿ ಮಕ್ಕಳ ರಕ್ಷಣಾಧಿಕಾರಿ ಶರಣಪ್ಪ ಹೇಳಿಕೆ

# ದತ್ತು ಪ್ರಕ್ರಿಯೆ ಕಾನೂನುಬದ್ಧವಾಗಿರಲಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಈ ನೆಲದ ಕಾನೂನಿನಂತೇ ಮಕ್ಕಳನ್ನು ದತ್ತು ಪಡೆಯಬೇಕು. ಈ ಹಿಂದೆ ಪಡೆಯುತ್ತಿದ್ದ ಸಾಂಪ್ರದಾಯಿಕ ದತ್ತು ಪಡೆಯುವುದನ್ನು ಕೈಬಿಟ್ಟು, ಕಾನೂನು ಪ್ರಕಾರವೇ ದತ್ತು ಪಡೆಯಬೇಕು ಎಂದು ಮಕ್ಕಳ ರಕ್ಷಣಾಧಿಕಾರಿ ಶರಣಪ್ಪ ಹೇಳಿದರು.

ನಗರದ ಸಂಕ್ಲಾಪುರದ ಸರ್ಕಾರಿ ವಿಶೇಷ ದತ್ತು ಸಂಸ್ಥೆಯಲ್ಲಿ ನಡೆದ ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ ನಿಮಿತ್ತ ದತ್ತು ಪಡೆಯಲು ಇಚ್ಛಿಸುವಂತಹ ಪೋಷಕರಿಗೆ ಹಾಗೂ ದತ್ತು ತೆಗೆದುಕೊಳ್ಳಲು ಆನ್‌ಲೈನ್ ನೋಂದಣಿ ಮಾಡಿಸಿರುವ ಪೋಷಕರಿಗೆ ಕಾನೂನು ಬದ್ಧ ದತ್ತು ಹಾಗೂ ದತ್ತು ಪ್ರಕ್ರಿಯೆ, ದತ್ತುವಿನ ಮಾನದಂಡಗಳ ಕುರಿತು ನಡೆದ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲರೂ ಕಾನೂನುಬದ್ಧ ದತ್ತು ಪ್ರಕ್ರಿಯೆ ಕುರಿತು ಅರಿತುಕೊಳ್ಳಬೇಕು ಎಂದರು.

ಸರ್ಕಾರಿ ವಿಶೇಷ ದತ್ತು ಕೇಂದ್ರದ ಜಿಲ್ಲಾ ಸಂಯೋಜಕಿ ವಿದ್ಯಾಬಾಯಿ ಮಾತನಾಡಿ, ಮಕ್ಕಳ ಹಕ್ಕುಗಳ ರಕ್ಷಣೆ ಬಗ್ಗೆ ಎಲ್ಲರೂ ಅರಿತುಕೊಳ್ಳಬೇಕು. ಕುಟುಂಬದಲ್ಲಿನ ದತ್ತು ಪಡೆಯುವುದಕ್ಕೆ ಸರ್ಕಾರದ ಯಾವುದೇ ಮಾನ್ಯತೆ ಇಲ್ಲ. ಕಾನೂನಿನಲ್ಲೂ ಇದಕ್ಕೆ ಮಾನ್ಯತೆ ಇಲ್ಲದಾಗಿದೆ. ಹಾಗಾಗಿ ಸರ್ಕಾರ ರೂಪಿಸಿರುವ ಕಾನೂನಿನ ಅನ್ವಯವೇ ದತ್ತು ಪಡೆಯಬೇಕು. ಈ ದತ್ತು ಪ್ರಕ್ರಿಯೆಯಲ್ಲಿ ದತ್ತು ಕೇಂದ್ರದ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಲಿದೆ. ಪ್ರತಿಯೊಂದು ಮಾಹಿತಿ ಬೆಂಗಳೂರು ಹಾಗೂ ಹೊಸದಿಲ್ಲಿ ಮುಖ್ಯ ಕಚೇರಿಗಳ ಗಮನಕ್ಕೆ ತರಲಾಗುವುದು. ಸರ್ಕಾರಿ ನಿಯಮಾವಳಿ ಮಾನದಂಡದ ಅನ್ವಯವೇ ದತ್ತು ಪ್ರಕ್ರಿಯೆ ನಡೆಸಲಾಗುತ್ತದೆ ಎಂದರು.

ಮಕ್ಕಳ ಸಹಾಯವಾಣಿ ಜಿಲ್ಲಾ ಸಂಯೋಜಕ ಷಣ್ಮುಖ ಮಾತನಾಡಿ, ಬಾಲ್ಯವಿವಾಹ, ಬಾಲಕಾರ್ಮಿಕ ಸೇರಿದಂತೆ ಮಕ್ಕಳ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಮಕ್ಕಳ ಸಹಾಯವಾಣಿ 1098ಗೆ ಕರೆ ಮಾಡಬೇಕು. ಇದರಿಂದ ಮಕ್ಕಳಿಗೆ ತಕ್ಷಣವೇ ನೆರವು ದೊರೆಯಲಿದೆ ಎಂದರು.

ಪೋಷಕತ್ವ ಸಂಯೋಜಕ ಸ್ವಾಮಿ ಮಾತನಾಡಿದರು. ಸರ್ಕಾರಿ ವಿಶೇಷ ದತ್ತು ಸಂಸ್ಥೆಯ ಸಮಾಜ ಕಾರ್ಯಕರ್ತೆ ರೇಣುಕಾ ನಿಂಬರಗಿ ನಿರ್ವಹಿಸಿದರು. ಜಿಲ್ಲೆಯ ವಿವಿಧೆಡೆ ಆಗಮಿಸಿದ್ದ ಪೋಷಕರು ಹಾಗೂ ದತ್ತುಕೇಂದ್ರದ ಸಿಬ್ಬಂದಿ, ಇತರರು ಇದ್ದರು.

# ಕರಾಟೆಯಲ್ಲಿ ಕೊಟ್ಟೂರಿನ 12 ಮಕ್ಕಳಿಗೆ ವಿವಿಧ ಪ್ರಶಸ್ತಿ



■ **ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ಪಟ್ಟಣದ 12 ಮಕ್ಕಳು ಕರಾಟೆಯಲ್ಲಿ ಜಯಸಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಹೊಸಪೇಟೆಯ ಪುಣ್ಯಾನಂದಪುರಿ ಕಲ್ಯಾಣ ಮಂಟಪದಲ್ಲಿ ಟ್ರೇಡಿಷನಲ್ ಶೋಟೋಕಾನ್ ಅಕಾಡೆಮಿ ವತಿಯಿಂದ ಭಾನುವಾರ ನಡೆದ 3ನೇ ರಾಜ್ಯಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಕೊಟ್ಟೂರು ಪಟ್ಟಣದ 12 ವಿದ್ಯರ್ಥಿಗಳು ಭಾಗವಹಿಸಿ ವಿವಿಧ ಪ್ರಶಸ್ತಿ ಗಳಿಸಿದ್ದಾರೆ. ದಾತ್ರಿಪ್ರಿಯಾ, ರುಶಾಂಕ್, ಶ್ರೀನಿವಾಸ ಆರ್, ಅರಾನ್, ಆರಿಜ್,ಚಿರಾಗ್, ಲುಕ್ಮನ್, ಸೂಫಿಯಾನ್, ಯಶಸ್, ದಿವ್ಯಶ ಮೋಕ್ಷ, ಸುಪಿಯನ್, ಪ್ರೀತಮ್ ಕರಾಟೆ ಸ್ಪರ್ಧೆಯಲ್ಲಿ ಸಾಧನೆ ತೋರಿದ್ದಾರೆ. ಕರಾಟೆ ಸ್ಪರ್ಧೆಯಲ್ಲಿ ಉತ್ತಮ ಸಾಧನೆ ತೋರಿದ ಮಕ್ಕಳಿಗೆ ಪಟ್ಟಣದ ಪ್ರಮುಖರು ಹಾಗೂ ಪೋಷಕರು, ತರಬೇತಿದಾರ ಬಿ ಯಮುನೂರಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

# ಸಂವಿಧಾನದಿಂದ ಸದೃಢ ಪ್ರಜಾಪ್ರಭುತ್ವ : ನ್ಯಾ. ಕೆ.ಜಿ.ಶಾಂತಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಂವಿಧಾನವು ದೇಶದ ಬೆನ್ನೆಲುಬು ಇದ್ದಂತೆ. ವಿಶ್ವದ ಎಲ್ಲಾ ಸಂವಿಧಾನಗಳಿಗಿಂತಲೂ ಶ್ರೇಷ್ಠ, ಲಿಖಿತ ಹಾಗೂ ಅತ್ಯಂತ ಬಲಿಷ್ಠ ಸಂವಿಧಾನವನ್ನು ಭಾರತ ದೇಶ ಹೊಂದಿದ್ದು, ಸಂವಿಧಾನದಿಂದ ಸದೃಢ ಪ್ರಜಾಪ್ರಭುತ್ವ ಹೊಂದಲು ಸಹಕಾರಿಯಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಹೇಳಿದರು.

ಜಿಲ್ಲಾ ನ್ಯಾಯಾಂಗ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ಸಂಯುಕ್ತಾಶ್ರಯದಲ್ಲಿ ನಗರದ ತಾಳೂರು ರಸ್ತೆಯ ಹೊಸ ನ್ಯಾಯಾಲಯ



ಸಂಕೀರ್ಣದ ವಿಸಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಹಾಗೂ ಸಂವಿಧಾನ ಪ್ರಸ್ತಾವನೆ ಬೋಧಿಸಿ ಅವರು ಮಾತನಾಡಿದರು.

ಭಾರತ ಸಂವಿಧಾನವು 1948ರ ನವೆಂಬರ್ 26 ರಂದು ಅಂಗೀಕಾರಗೊಂಡು, 1950ರ >>4

# ಯುವ ಸಂಘಗಳ ನೊಂದಣಿ ನವೀಕರಣಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೊಂದಣಿಯಾದ ಯುವಕ–ಯುವತಿ ಸಂಘಗಳನ್ನು ನವೀಕರಣ ಮತ್ತು ಹೊಸದಾಗಿ ನೋಂದಣಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಇಲಾಖೆಯಲ್ಲಿ ನೋಂದಣಿಯಾದ ಸಂಘಗಳಲ್ಲಿ ಹಲವಾರು ಸಂಘಗಳು ನವೀಕರಣ ಆಗಿರುವುದಿಲ್ಲ. ಇಲಾಖೆಯಲ್ಲಿ ನೋಂದಣಿಯಾದ ಯುವಕ ಯುವತಿ ಸಂಘಗಳನ್ನು ಸಂಬಂಧಪಟ್ಟ ಅಧ್ಯಕ್ಷರು, ಕಾರ್ಯದರ್ಶಿಗಳು ಬೈಲಾ ಕಾಫಿ ಝುರಾಕ್ಸ್ ಪ್ರತಿ ಹಾಗೂ ಇಲಾಖೆಯ ನೋಂದಣಿ ಪತ್ರ ಝುರಾಕ್ಸ್ ಪ್ರತಿಯೊಂದಿಗೆ ನ.30 ರೊಳಗಾಗಿ ನವೀಕರಣ ಮಾಡಿಸಬೇಕು. ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಾರ್ಯಾಲಯ, ದೂ ಸಂ. 08539–230121 ಗೆ ಸಂಪರ್ಕಿಸಬಹುದಾಗಿದೆ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ

# ಉತ್ತಮ ಪ್ರಜಾಪ್ರಭುತ್ವ-ಸಂವಿಧಾನದ ಮಹತ್ವ

■ **ಚೇತನ ಭಾರ್ಗವ, ಬೆಂಗಳೂರು**



ಒಂದು ರಾಷ್ಟ್ರವು ಪ್ರಗತಿಯನ್ನು ಹೊಂದಬೇಕಾದರೆ ಅಲ್ಲಿಯ ಕಾನೂನುನಿಯಮವ್ಯವಸ್ಥಿತವಾಗಿರುವುದು ಅವಶ್ಯಕ ಹಾಗೂ ಆ ರಾಷ್ಟ್ರದಲ್ಲಿರುವ ಸರ್ಕಾರವು ಸಮರ್ಥವಾದ ದಕ್ಷ ಆಡಳಿತವನ್ನು ನಡೆಸಬೇಕು. ಅನೇಕ ರಾಷ್ಟ್ರಗಳಲ್ಲಿ ಅನೇಕ ರೀತಿಯ ಅಧಿಕಾರ ಹೊಂದಿದ ಸರ್ಕಾರಗಳಿವೆ. ಮೊದಲು ಗ್ರೀಕ್ ನಗರದ ರಾಜ್ಯವಾದ ಅಥೆನ್ಸ್ ನಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿತ್ತು. ಅಬ್ರಹಾಮ್ ಲಿಂಕನ್ ರವರು ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ರಚಿತವಾದ ಸರ್ಕಾರವೇ ಪ್ರಜಾಪ್ರಭುತ್ವವೆಂದು ವ್ಯಾಖ್ಯಾನಿಸಿದ್ದಾರೆ. ಈ ವ್ಯವಸ್ಥೆಯಲ್ಲಿ ದೇಶದ ಜನರೇ ಸರ್ಕಾರವನ್ನು ಆಯ್ಕೆ ಮಾಡುತ್ತಾರೆ. ಭಾರತವು ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಇಲ್ಲಿ ಪ್ರಜೆಗಳೇ ಪ್ರಭುಗಳು. ಮತದಾನ ಮಾಡುವ ಮೂಲಕ ಪ್ರಜೆಗಳು ಪ್ರಜಾಪ್ರಭುತ್ವದ ಹಕ್ಕನ್ನು ಚಲಾಯಿಸುತ್ತಾರೆ.

ಯಾವುದೇ ರಾಷ್ಟ್ರವು ಉತ್ತಮವಾದ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಕೂಡಿದ್ದರೆ ಆ ರಾಷ್ಟ್ರ ಸದೃಢ ರಾಷ್ಟ್ರವಾಗಿ ನಿರ್ಮಾಣವಾಗುತ್ತದೆ. ಸಂವಿಧಾನವು ಪ್ರಜಾಪ್ರಭುತ್ವದ ಆತ್ಮವಿದ್ದಂತೆ. ಸಂವಿಧಾನದ ಅಡಿಯಲ್ಲಿಯೇ ಪ್ರಜಾಪ್ರಭುತ್ವದ ಕಾರ್ಯಗಳು ನಡೆಯುತ್ತದೆ. ದೇಶದ ಸಮಗ್ರ ಚಿತ್ರಣವನ್ನು ಸಂವಿಧಾನವು ನೀಡುತ್ತದೆ. ಸಂವಿಧಾನವು ಭಾರತವನ್ನು ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಘೋಷಿಸಿದೆ.

ಉತ್ತಮವಾದ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದಾಗ ಮಾತ್ರ ಪ್ರಜೆಗಳು ಶಾಂತಿ ನೆಮ್ಮದಿ ಭ್ರಾತೃತ್ವ ಹಾಗೂ ಸಾಮರಸ್ಯದಿಂದ ಜೀವಿಸಲು ಸಾಧ್ಯವಾಗುತ್ತದೆ. ಉತ್ತಮವಾದ ಪ್ರಜಾಪ್ರಭುತ್ವವು ಜನರಿಗೆ ಸಮಾನವಾದ ಹಕ್ಕನ್ನು ಕಲ್ಪಿಸಿ ಕೊಡುವುದರ ಜೊತೆಗೆ ಕಾನೂನು ವ್ಯವಸ್ಥೆಯನ್ನು ಕಾಪಾಡುವುದರ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಸಹಾಯಕವಾಗುತ್ತದೆ.

ಭಾರತದ ಸಂವಿಧಾನದ ರಚನೆಗೆ ಕೆಲವು ವರ್ಷಗಳ ಹಿಡಿದವು. ಬಾಬಾ ಸಾಹೇಬ್ ಅಂಬೇಡ್ಕರ್ ರಂತಹ ಮೇಧಾವಿಗಳು ಅಧ್ಯಯನ ಕೈಗೊಂಡು ಭಾರತದ ಸಾಂಸ್ಕೃತಿಕ ಭೌಗೋಳಿಕ ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡು, ಭಾಷೆ, ಜಾತಿ, ಸಂಗಡ ಬುಡಕಟ್ಟು ಹೀಗೆ ನಾನಾ ವೈವಿಧ್ಯತೆಗಳನ್ನು ಸಮೀಕರಿಸಿ ಎಲ್ಲರಿಗೂ ಸಮಾನ ಹಕ್ಕು ಕರ್ತವ್ಯ ಸಾರುವಂತಹ ಸಂವಿಧಾನಾತ್ಮಕ ರಚನೆಯನ್ನು ಕರಡು ಸಮಿತಿಯ ವತಿಯಿಂದ 1948 ನವೆಂಬರ್ 26ರಂದು ಭಾರತದ ಸಂವಿಧಾನ ಪ್ರಾಧಿಕಾರಕ್ಕೆ ಅರ್ಪಿಸಿದರು. ಆ ಸಮಯದಲ್ಲಿ ಬಾಬು ರಾಜೇಂದ್ರ ಪ್ರಸಾದ್ ಇದರ ಅಧ್ಯಕ್ಷರಾಗಿದ್ದರು. ನಂತರ ಇದು 1950 ಜನವರಿ 26ರಂದು ಜಾರಿಯಾಯಿತು. ಭಾರತ ಬ್ರಿಟಿಷ್ ತೆಕ್ಕೆಯಿಂದ ಸ್ವತಂತ್ರವಾಗಿ ಮೂರು ವರ್ಷಗಳ ನಂತರ ಗಣರಾಜ್ಯವಾಗಿ ಗುರುತಿಸಿಕೊಂಡು ಪ್ರಪಂಚದ ನಕ್ಷೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿತು. ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರನ್ನು ಹೆಮ್ಮೆಯಿಂದ ಸಂವಿಧಾನದ ಶಿಲ್ಪಿ ಎಂದು ಕರೆಯುತ್ತೇವೆ.

ಸಂವಿಧಾನ ಭಾರತದ ಸಂವಿಧಾನ ಮೂರು ಮುಖ್ಯ ವಿಭಾಗಗಳನ್ನು ಹೊಂದಿದೆ.ಅವು ಯಾವುದೆಂದರೆ ಶಾಸಕಾಂಗ, ಕಾರ್ಯಾಂಗ, ಹಾಗೂ ನ್ಯಾಯಾಂಗ

**ಶಾಸಕಾಂಗ:**

ಇದು ಆಡಳಿತಾತ್ಮಕ ವ್ಯವಸ್ಥೆಯ ಮೂಲಭೂತ ಅಂಗಗಳಲ್ಲೊಂದಾಗಿದೆ . ಲೋಕಸಭೆ ಹಾಗೂ ರಾಜ್ಯಸಭೆ ಎಂಬ ಭಾಗಗಳಿದ್ದು ದೇಶದ ಆಡಳಿತದ ಚುಕ್ಕಾಣಿ ಹೊರುತ್ತದೆ . ಇದರ ನೇತೃತ್ವ ಖುದ್ದು ಪ್ರಧಾನಿಯ ಸುಪರ್ದಿಯಲ್ಲಿರುತ್ತದೆ . ಲೋಕಸಭೆಯಲ್ಲಿ ಜನರ ಮತದಾನದಿಂದ ಆರಿಸಿ ಬಂದ ಜನ ಪ್ರತಿನಿಧಿಗಳಿದ್ದರೆ , ರಾಜ್ಯಸಭೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದ ವ್ಯಕ್ತಿಗಳನ್ನು ಆರಿಸಿ ರಾಜ್ಯಸಭೆಗೆ ಚುನಾಯಿಸಿ ಪ್ರತಿನಿಧಿಸಲಾಗುತ್ತದೆ . ಲೋಕಸಭೆಯಲ್ಲಿ ಜನಪ್ರತಿನಿಧಿತ ಸರ್ಕಾರ ದೇಶದ ಆಡಳಿತ ನಡೆಸಿದರೆ , ರಾಜ್ಯಸಭೆ ಅದರ ಮೇಲ್ವಿಚಾರಣೆಯನ್ನು ವಹಿಸುತ್ತದೆ . ದೇಶದ ಅಭಿವೃದ್ಧಿಯ ಜನಹಿತ ಯೋಜನೆಗಳ ಮಸೂದೆಗಳ ಮಂಡನೆ , ಚರ್ಚೆ ಕೊನೆಗೆ ಅದನ್ನು ಅನುಮೋದಿಸುವ ಅಥವಾ ತಿರಸ್ಕರಿಸುವ ಪ್ರಕ್ರಿಯೆ ಲೋಕಸಭೆಯಿಂದ ಮೊದಲ್ಗೊಂಡು , ರಾಜ್ಯಸಭೆಯಲ್ಲಾಗುತ್ತದೆ .

**ಕಾರ್ಯಾಂಗ**

ಶಾಸಕಾಂಗ ವಿಭಾಗವು ನೀಲಿನಕ್ಷೆ ಸಿದ್ಧಪಡಿಸುವ ಹೊಣೆ ವಹಿಸಿದರೆ ಕಾರ್ಯಾಂಗವನ್ನು ಕಟ್ಟಡ ಕಟ್ಟುವ ಜವಾಬ್ದಾರಿಗೆ ಹೋಲಿಸಬಹುದು . ಕಾರ್ಯಾಂಗದ ಸರ್ವೋಚ್ಚ ಅಧಿಕಾರ ರಾಷ್ಟ್ರಪತಿಗಳ ಕೈಯಲ್ಲಿರುತ್ತದೆ . ಅದರ ಅನುಷ್ಠಾನ ಪ್ರಧಾನಿ ಕಾರ್ಯಾಲಯದಿಂದ ನಡೆಯುತ್ತದೆ . ಇದರಲ್ಲಿ ಸೈನ್ಯದ ಮೂರೂ ವಿಭಾಗಗಳಲ್ಲದೆ ಸಿವಿಲ್ ವಿಭಾಗದ ಆಡಳಿತಾತ್ಮಕ ವ್ಯಾಪ್ತಿಯೂ ಇದರಲ್ಲೇ ಸೇರಿದೆ. ಯೋಜನೆಗಳ ಅನುಷ್ಠಾನ , ಚುನಾವಣೆಗಳ ನಡೆಸುವುದು , ಶಿಕ್ಷಣ ಬ್ಯಾಂಕ್ , ರೈಲ್ವೆ, ಸಂಪರ್ಕ ಹೀಗೆ ಹಲವು ಕಾರ್ಯಾಲಯಗಳು ಒಂದಕ್ಕೊಂದು ಪೂರಕವಾಗಿ ದಕ್ಷವಾಗಿ ಕೆಲಸ ನಿರ್ವಹಿಸುವಂತೆ ಮಾಡುವ ಜವಾಬ್ದಾರಿ ಕಾರ್ಯಾಂಗಕ್ಕಿದೆ

**ನ್ಯಾಯಾಂಗ**

ದೇಶದ ಸಂಪೂರ್ಣ ನ್ಯಾಯ ವ್ಯವಸ್ಥೆಯ ಉಸ್ತುವಾರಿ ನ್ಯಾಯಾಂಗ ವಹಿಸುತ್ತದೆ . ಇದು ಒಂದು ಸ್ವತಂತ್ರ ಕಾರ್ಯನಿರ್ವಹಿಸುತ್ತದೆ . ಪ್ರತಿಯೊಬ್ಬ ನಾಗರಿಕರಿಗೂ ಯಾವುದೇ ಪ್ರಭಾವಕ್ಕೊಳಗಾಗದೆ ಸಮರ್ಪಕವಾಗಿ ನ್ಯಾಯ ವಿತರಿಸುವಂತಹ ವ್ಯವಸ್ಥೆ ಇದರ ಧ್ಯೇಯ . ಸರ್ವೋಚ್ಚ ನ್ಯಾಯಾಲಯವಲ್ಲದೆ ರಾಜ್ಯ ಮಟ್ಟದ ಉಚ್ಚ ನ್ಯಾಯಾಲಯಗಳನ್ನೂ ಇದು ಸಮಗ್ರ ಕಾನೂನಿನ ಅಡಿಯಲ್ಲಿ ನಿರ್ವಹಿಸುತ್ತದೆ . ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ , ರಾಜ್ಯ ರಾಜ್ಯಗಳ ವಿವಾದಗಳನ್ನು ಬಗೆಹರಿಸುವಲ್ಲಿ , ಕ್ರಿಮಿನಲ್ ಅಲ್ಲದೆ ಸಿವಿಲ್ ವ್ಯಾಜ್ಯಗಳ ಪರಿಹಾರದ ಚೌಕಟ್ಟನ್ನು ಇದು ನೋಡಿಕೊಳ್ಳುತ್ತದೆ . ದೇಶದ ಶಾಂತಿ ಸಾಮರಸ್ಯವನ್ನು ಪ್ರಜೆಗಳ ಸಮಾನ ನ್ಯಾಯದ ಹಕ್ಕನ್ನು ಇದು ಎತ್ತಿ ಹಿಡಿಯುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನಕ್ಕೆ ವಿಶೇಷವಾದ ಮಹತ್ವವನ್ನು ನೀಡಲಾಗಿದೆ. ಸಂವಿಧಾನವು ರಾಷ್ಟ್ರದ ಮೂಲಭೂತ ಕಾನೂನು ಆಗಿದೆ ಹಾಗೂ ಸರ್ಕಾರದ ಅಧಿಕಾರ ಮತ್ತು ನಾಗರಿಕ ಹಕ್ಕು ಕರ್ತವ್ಯಗಳನ್ನು ವಿವರಿಸುತ್ತದೆ. ಸಂವಿಧಾನವು ವೈಯುಕ್ತಿಕ ಸ್ವಾತಂತ್ರ್ಯಗಳನ್ನು ರಕ್ಷಿಸುತ್ತದೆ ಮತ್ತು ಸಮಾಜದೊಳಗಿನ ಸ್ಥಿರತೆ ಸುವ್ಯವಸ್ಥೆಯನ್ನು ಉತ್ತೇಜಿಸುತ್ತದೆ. ಇದು ಪ್ರತಿಯೊಬ್ಬ ನಾಗರೀಕನಿಗೂ ಸಮಾನ ಹಕ್ಕನ್ನು ಒದಗಿಸುವ ಸಾಧನವಾಗಿದೆ ಹಾಗೆಯೇ ರಾಷ್ಟ್ರವು ಪ್ರಗತಿ ಮತ್ತು ಸಮೃದ್ಧಿಯ ಹಾದಿಯಲ್ಲಿ ಸಾಗಲು ದಾರಿದೀಪವಾಗಿದೆ.

ಸಂವಿಧಾನವು ರಾಷ್ಟ್ರದ ಆಡಳಿತಕ್ಕೆ ಅಡಿಪಾಯದ ಚೌಕಟ್ಟನ್ನು ಹಾಕಿಕೊಟ್ಟಿದೆ. ಅಧಿಕಾರದ ರಚನೆ ಮೂಲಭೂತ ಹಕ್ಕು ತತ್ವಗಳನ್ನು ವ್ಯಾಖ್ಯಾನಿಸುತ್ತದೆ ಕಾನೂನಿನ ನಿಯಮವನ್ನು ಎತ್ತಿ ಹಿಡಿಯಲು, ದೌರ್ಜನ್ಯದ ವಿರುದ್ಧ ಧ್ವನಿ ಎತ್ತಲು, ಮೂಲಭೂತ ಸ್ವಾತಂತ್ರ್ಯವನ್ನು ಖಾತ್ರಿಪಡಿಸಲು ನಮಗೆ ಸಂವಿಧಾನ ಅತ್ಯಗತ್ಯ. ಸಂವಿಧಾನವು ಸರ್ವೋಚ್ಚ ಕಾನೂನಿನಂತೆ ಕಾರ್ಯನಿರ್ವಹಿಸುತ್ತದೆ ನ್ಯಾಯ ಮತ್ತು ಸಮಾನತೆಯನ್ನು ಉತ್ತೇಜಿಸುತ್ತದೆ. ನ್ಯಾಯಯುತ ಮತ್ತು ಸಾಮರಸ್ಯದ ರಾಷ್ಟ್ರಕ್ಕೆ ಭದ್ರ ಬುನಾದಿಯನ್ನು ಒದಗಿಸುವ ಮೂಲಕ ಪ್ರಜಾಪ್ರಭುತ್ವ ಸಮಾಜದಲ್ಲಿ ಸಂವಿಧಾನವು ವಿಶೇಷವಾದ ಮಹತ್ವವನ್ನು ಪಡೆದುಕೊಂಡಿದೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಬಾಳಿಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

Sub : English (S.L)

### Prose : The Discovery (Continued)

Most important extracts (3 marks)

**9. "Discipline knows no buts."**

**a) Who said these words and to whom?**
Ans : Columbus said to Francisco.

**b) When does the speaker say?**
Ans : When Francisco was not ready to bring Guillermo as Columbus assigned.

**c) What does the statement mean?**
Ans : Discipline is necessary to achieve in life, so it should not have reasons.

**10. "Let Guillermo Ires be sent to me. He shall know what it is like in irons?"**

**a) Who said these words?**
Ans : Columbus said these words.www

**b) Why did he ask him to send Guillermo to him?**
Ans : Columbus wanted to punish Guillermo Ires.

**c) What does 'in irons' mean in this context?**
Ans : 'In Iron' means in jail or gaol.

**11. "The first man to move shall spend the rest of the night in irons!"**

**a) Who gave the warning?**
Ans : Columbus gave this warning.

**b) What made the speaker give this warning?**
Ans : The seamen/sailors rush in angry towards Columbus growling like infuriated animals.

**c) What was the reaction to this warning?**
Ans : They stopped moving but Guillermo moved forward.

**12. "And who's to put him in irons? We are thirty to one."**

**a) Who said these words?**
Ans :Guillermo said these.

**b) Who does 'him' refer to?**
Ans : The first man who moves towards Columbus.

**c) Why was he to be put in irons?**
Ans : Columbus was not ready to go back and made the seamen desperate.

**13. "I will perform it myself. Get below! Let me hear no more of this."**

**a) Who is the 'I' here?**
Ans : Columbus is 'I' here.

**b) When did the speaker say so?**
Ans : When Francisco refused to bring Guillermo to him.

**c) What does 'it' mean in the context?**
Ans : 'It' refers to the office or the ship.

**14. "We've stood too much. We've been duped day in, day out. We're men with the common feelings of men."**

**a) Who said these words?**
Ans : Guillermo said these words.

**b) When were these words said?**
Ans :Words were said when Columbus was not ready to hear more words.

**c) What does the word 'duped' mean here?**
Ans :They thought that they have been deceived by Columbus.

**15. "Who will navigate her?"**

**a) Who said this?**
Ans : Columbus said this.

**b) What does 'her' refer to?**
Ans :The word 'her' refers to the ship 'Santa Maria'

**c) When did the speaker say so?**
Ans : When Guillermo said, "I say if the Santa Maria shall turn her helm towards Spain at once or we are not men but sheep."

**d) What reply did the speaker get?**
Ans : Guillermo said that they were not men if they were unused to the sea and they would navigate her.

PRACTICE MAKES PERFECT

www.hampitimes.com - Hampi Times Margadarshi

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**28–11–2024 – ಗುರುವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಚಿತ್ತ |
| ಯೋಗ | : ಸೌಭಾಗ್ಯ |
| ಕರಣ | : ಗರಜ |
| ಸೂರ್ಯೋದಯ | : 06:50:47 |
| ಸೂರ್ಯಾಸ್ತ | : 17:39:09 |
| ರಾಹು ಕಾಲ | : 13:3614:57 |
| ಯಮಘಂಡ ಕಾಲ | : 06:51–08:12 |
| ಗುಳಿಕ ಕಾಲ | : 09:33–10:54 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 27–11–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.15 ಅಡಿ |
| ಒಳ ಹರಿವು | 3302 ಕ್ಯುಸೆಕ್ |
| ಹೊರ ಹರಿವು | 6984 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 94.629 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1594.66 ಅಡಿ |
| ಒಳ ಹರಿವು | 508 ಕ್ಯುಸೆಕ್ |
| ಹೊರ ಹರಿವು | 8542 ಕ್ಯುಸೆಕ್ |
| ಸಾಮರ್ಥ್ಯ | 15.364 ಟಿಎಂಸಿ |

ಸಿರಿಧಾನ್ಯ ನಡಿಗೆ ಮೂಲಕ ಕೊಪ್ಪಳದಲ್ಲಿ ಪಾರಂಪರಿಕ ಆಹಾರ ಪದ್ಧತಿಗಳ ವಿಶೇಷ ಅರಿವು

# ಸಿರಿಧಾನ್ಯ ಸಿಂಗಾರ ಆರೋಗ್ಯ ಬಂಗಾರ

**ಹಂಪಿ ಟೈಮ್ಸ್ ಕೊಪ್ಪಳ**

ಕೃಷಿ ಇಲಾಖೆ ವತಿಯಿಂದ ಬುಧವಾರ ಕೊಪ್ಪಳ ನಗರದಲ್ಲಿ ಸಿರಿಧಾನ್ಯ ನಡಿಗೆ ಮೂಲಕ ಕೊಪ್ಪಳದಲ್ಲಿ ಪಾರಂಪರಿಕ ಆಹಾರ ಪದ್ಧತಿಗಳ ವಿಶೇಷ ಅರಿವು ಮೂಡಿಸಲಾಯಿತು.

2024–25ನೇ ಸಾಲಿನ ಸಿರಿಧಾನ್ಯ ನಡಿಗೆ ಕಾರ್ಯಕ್ರಮಕ್ಕೆ ಶ್ರೀ ಗವಿಸಿದ್ದೇಶ್ವರ ಸ್ವಾಮೀಜಿಗಳು ಶ್ರೀ ಗವಿಮಠ ಆವರಣದಲ್ಲಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ಸಹಾಯಕ ಕೃಷಿ ನಿರ್ದೇಶಕ ಜೀವನಸಾಬ ಸೇರಿದಂತೆ ಕೃಷಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಇನ್ನಿತರರು ಇದ್ದರು.

ಪಾರಂಪರಿಕ ಆಹಾರ ಪದ್ಧತಿಗಳ ವಿಶೇಷ ಅರಿವು: ನಗರದ ಶ್ರೀ ಗವಿಮಠ ಆವರಣದಿಂದ ಆರಂಭವಾದ ಸಿರಿಧಾನ್ಯ ನಡಿಗೆಯು ಗಡಿಯಾರ ಕಂಬ ಮತ್ತು ಜವಾಹರ ರಸ್ತೆ ಮಾರ್ಗವಾಗಿ ನಗರದ ಅಶೋಕ ಸರ್ಕಲ್ ವರೆಗೆ ನಡೆಯಿತು. ಸಿರಿಧಾನ್ಯಗಳು ಪೋಷಕಾಂಶಗಳಿಂದ ಸಮೃದ್ಧವಾಗಿದ್ದು, ಹೃದಯ ಆರೋಗ್ಯ, ಮದುಮೇಹ ನಿಯಂತ್ರಣ ಮತ್ತು ತೂಕ ಸಮತೋಲನಕ್ಕೆ ಸಹಾಯ ಮಾಡುತ್ತವೆ. ಈ ಆಹಾರಗಳ ಉಪಯೋಗ ವಿವಿಧ ರೀತಿಯ ಸ್ಪರ್ಧೆಗಳು ನಮ್ಮ ಪಾರಂಪರಿಕ ಆಹಾರ ಪದ್ಧತಿಗಳನ್ನು ಜನಪ್ರಿಯಗೊಳಿಸಲು ಸಹಾಯ ಮಾಡುತ್ತವೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮದಲ್ಲಿ ನಮ್ಮ ನಡಿಗೆ ಸಿರಿಧಾನ್ಯಗಳ ಕಡೆಗೆ, ಸಿರಿಧಾನ್ಯ ಸಿಂಗಾರ ಆರೋಗ್ಯ ಬಂಗಾರ, ಸಿರಿಧಾನ್ಯಗಳ ತಾಕತ್ತು ಸಕಲ ಪೌಷ್ಠಿಕಾಂಶಗಳ ಸಂಪತ್ತು, ಸಿರಿಧಾನ್ಯ ಬೆಳೆ ಇರಲಿ ಪ್ರೋತ್ಸಾಹ ಧನ ತರಲಿ, ಬರಗಾರದಲ್ಲೂ ಬಂಗಾರ ಸಿರಿಧಾನ್ಯ, ಸಿರಿಧಾನ್ಯ ಬಳಸಿರಿ ಆರೋಗ್ಯದಲ್ಲಿ ಸಿರಿವಂತರಾಗಿ, ಸಜ್ಜೆ ತಿಂದವರು ಉತ್ಸಾಹದ ಕಹಳೆ ಊದುವರು, ರಾಗಿ ತಿಂದವರು ರೋಗದಿಂದ ಮುಕ್ತರಾಗುವರು' ಎಂಬ ಸಂದೇಶ ಫಲಕಗಳನ್ನು ಹಿಡಿದು ವಿಶೇಷ ಜಾಗೃತಿ ಮೂಡಿಸಲಾಯಿತು.




ಟ್ರಾಫಿಕ್ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ಮುಖ್ಯ : ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಹೇಳಿಕೆ

# ಅಪರಾಧ ತಡೆಗೆ ಸಿಸಿ ಕ್ಯಾಮರ ಅಳವಡಿಸಿ



**ಹಂಪಿ ಟೈಮ್ಸ್ ಕೊಟ್ಟೂರು.**

ಜನರ ಸುರಕ್ಷತೆ ದೃಷ್ಠಿಯಿಂದ, ಪಿ.ಎಸ್.ಐ ಗೀತಾಂಜಲಿ ಶಿಂಧೆ ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಬೆಸ, ಸರಿ ಸಂಖ್ಯೆಯಲ್ಲಿ ಫಾರ್ಕಿಂಗ್ ನಿಯಮ ಅಳವಡಿಸಿ ಟ್ರಾಫಿಕ್ ನಿಯಂತ್ರಣಕ್ಕೆ ಮುಂದಾಗಿದ್ದಾರೆ, ಇದಕ್ಕೆ ಸಾರ್ವಜನಿಕರ ಸಹಕಾರವು ಮುಖ್ಯ ಎಂದು ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಹೇಳಿದರು.

ಪಟ್ಟಣದ ಪೋಲೀಸ್ ಠಾಣೆ ಆವರಣದಲ್ಲಿ ಬುಧವಾರ ಪೋಲೀಸ್ ಇಲಾಖೆ ಕೂಡ್ಲಿಗಿ ಡಿವೈಎಸ್ಪಿ ಅವರ ನೇತೃತ್ವದಲ್ಲಿ ಏರ್ಪಡಿಸಿದ ಜನ ಸಂಪರ್ಕ ಸಭೆಯಲ್ಲಿ ಮಾತನಾಡಿದರು. ಜ್ಯೂನಿಯರ್ ಕಾಲೇಜ್‌ನಲ್ಲಿ ಈಗಾಗಲೆ ಸಿಸಿ ಟಿವಿ ಅಳವಡಿಸಿದ್ದಾರೆ. ಪಟ್ಟಣದಲ್ಲಿ ಸಿಸಿ ಟಿವಿ ಅಳವಡಿಕೆಗೆ ಪಪಂ ಮುಂದಾಗಬೇಕು. ಕಳ್ಳತನ ಹಾಗೂ ಇತರೆ ಅಪರಾದಗಳನ್ನು ತಡಿಯಲು ಅನುಕೂಲವಾಗುತ್ತೆ ಎಂದು ಹೇಳಿ, ಮಟ್ಕಾ, ಜೂಜಾಟ ಕ್ಯಾನ್ಸರ್ ತರ ಇದನ್ನು ತಡೆಯುವಲ್ಲಿ ಇಲಾಖೆ ಅನೇಕ ಕ್ರಮ ಕೈಗೊಂಡಿದೆ. ಕೆಲವರನ್ನು ಗಡಿಪಾರು ಮಾಡಿದೆ ಎಂದರು.

ಸಿಪಿಐ ವೆಂಕಟಸ್ವಾಮಿ ಮಾತನಾಡಿ, ಕೊಟ್ಟೂರು ಪಟ್ಟಣ ವೇಗವಾಗಿ ಬೆಳೆಯುತ್ತಿರುವುದರಿಂದ ಪಟ್ಟಣದ ವ್ಯಾಪಾರಿಗಳು ಸುರಕ್ಷತೆ ದೃಷ್ಠಿಯಿಂದ ಅಂಗಡಿ ಹಾಗೂ ಜನಸಂದಣಿ ಇರುವ ಜಾಗದಲ್ಲಿ ಸಿ.ಸಿ ಕ್ಯಾಮರ ಅಳವಡಿಕೆಗೆ ಮುಂದಾಗಬೇಕೆಂದರು.

ಸಾಹಿತಿ ಉಜ್ಜಿನಿ ರುದ್ರಪ್ಪ ಮಾತನಾಡಿ, ಪಿಎಸ್ಐ ಶಿಂಧೆ ಅವರಿಂದ ತಾಲೂಕಿನ ಹಳ್ಳಿ ಪಟ್ಟಣ ಶಾಂತವಾಗಿದೆ, ಕರ್ತವ್ಯದ ಜೊತೆಗೆ ಇಲಾಖೆ ಏರ್ಪಡಿಸಿದ ಕ್ರೀಡೆಯಲ್ಲಿ ಚಾಂಪಿಯನ್ ಹಿರಿಮೆ ಪಡೆದು ಕೊಟ್ಟೂರು ಠಾಣೆಗೆ ಹೆಮ್ಮೆ ತಂದಿದ್ದಾರೆ ಎಂದರು.

ಮುಖಂಡ ಬದ್ದಿ ಮರಿಸ್ವಾಮಿ ಮಾತನಾಡಿ, ಯುವಕರು ವೇಗವಾಗಿ ಗಾಡಿಗಳನ್ನು ಓಡಿಸುತ್ತಾರೆ, ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ, ಇಂತಹ ಯವಕರ ನಿಯಂತ್ರಣಕ್ಕೆ ಮುಂದಾಗಬೇಕೆಂದರು. ರೈತ ಸಂಘದ ಭರಮ್ಮಣ್ಣ, ಜಯ ಪ್ರಕಾಶ ನಾಯ್ಕ್, ಮುಖಂಡ ದುರುಗೇಶ್, ಕಾಂಗ್ರೇಸ್ ಮುಖಂಡ ಅಡಕೆ ಮಂಜುನಾಥ, ಕೊಟ್ರೇಶ್, ಬಸವರಾಜ್, ಶಿವಪ್ರಕಾಶ್ ಮಾತನಾಡಿದರು. ಸಭೆಯಲ್ಲಿ ಪಟ್ಟಣದ ಮುಖಂಡರು ಪಾಲ್ಗೊಂಡಿ ದ್ದರು. ಪಿಎಸ್ಐ ಗೀತಾಂಜಲಿ ಶಿಂಧೆ, ನಿರ್ವಹಿಸಿದರು.

# ಸಂವಿಧಾನದಿಂದ ಸದೃಢ ಪ್ರಜಾಪ್ರಭುತ್ವ

**ಮೂರನೇ ಪುಟದಿಂದ**

ಜನವರಿ 26ರಂದು ಅನುಷ್ಠಾನಗೊಳಿಸಲಾಯಿತು. ಸ್ವಾತಂತ್ರ್ಯೋತ್ಸವದ ಬಳಿಕ ಸಂವಿಧಾನ ರಚಿಸಲು 389 ಸದಸ್ಯರನ್ನು ಒಳಗೊಂಡ ಕರಡು ಸಮಿತಿ ರಚನೆ ಮಾಡಿ, ಡಾ.ಬಿ.ಆರ್ ಅಂಬೇಡ್ಕರ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಯಿತು. 2 ವರ್ಷ 11 ತಿಂಗಳು 17 ದಿನಗಳ ಕಾಲ ಕೈಬರಹದಿಂದ ಸುದೀರ್ಘ ಸಂವಿಧಾನ ತಯಾರಾಗುತ್ತದೆ. ಅದರಲ್ಲಿ 1,17,369 ಪದಗಳು ಹೊಂದಿದೆ ಎಂದು ಅವರು ತಿಳಿಸಿದರು.

ಮೊದಲು ಸಂವಿಧಾನ ಜಾರಿಗೊಂಡಾಗ 395 ವಿಧಿಗಳು, 22 ಭಾಗ, 12 ಅನುಸೂಚಿಗಳನ್ನು ಹೊಂದಿದ್ದು, ಮೂಲ ಸಂವಿಧಾನ ಪ್ರತಿಗಳನ್ನು ಸಂಸತ್‌ನ ಗ್ರಂಥಾಲಯದಲ್ಲಿ ಸುರಕ್ಷಿತವಾಗಿ ಇರಿಸಲಾಗಿದೆ. ಪ್ರಸ್ತುತ 470 ವಿಧಿಗಳು, 25 ಭಾಗ, 12 ಅನುಸೂಚಿಗಳನ್ನು ಹೊಂದಿರುತ್ತದೆ ಎಂದು ಮಾಹಿತಿ ನೀಡಿದರು.

ಆಶೋತ್ತರ ಪೂರಕವಾದ ಸಂವಿಧಾನ ನೀಡಲು ಪ್ರಮುಖ ಪಾತ್ರ ವಹಿಸಿದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಅವರ ಸಮಿತಿಯನ್ನು ಈ ದಿನ ಸ್ಮರಿಸಬೇಕಿದೆ. ಸಂವಿಧಾನದ ಹಕ್ಕು ಮತ್ತು ಜವಾಬ್ದಾರಿಗಳನ್ನು ಅರಿತುಕೊಂಡು ಉತ್ತಮ ಜೀವನ ನಡೆಸಬೇಕು ಎಂದು ತಿಳಿಸಿದರು.

ಭಾರತವು ವಿವಿಧತೆಯಲ್ಲಿ ಏಕತೆ ಹೊಂದಿದ ದೇಶವಾಗಿದ್ದು, ಜಾತಿ, ಧರ್ಮ, ಎಲ್ಲೆ ಮೀರಿ ನಾವೆಲ್ಲರೂ ಒಂದು ಎನ್ನುವ ಸಂಕಲ್ಪ ತೊಡಬೇಕಲ್ಲದೆ ಪ್ರತಿಯೊಬ್ಬ ನಾಗರೀಕರು ರಾಷ್ಟ್ರದ ಏಕತೆ ಮತ್ತು ಅಖಂಡತೆ ಉಳಿಸಿಕೊಳ್ಳಲು ಶ್ರಮಿಸ ಬೇಕಿದೆ ಎಂದು ಹೇಳಿದರು.

ಜಿಲ್ಲಾ ನ್ಯಾಯಾಲದ ಕೌಟುಂಬಿಕ ನ್ಯಾಯಾಧೀಶರಾದ ಸಿದ್ಧಲಿಂಗ ಪ್ರಭು ಅವರು ಮಾತನಾಡಿದರು. ನ್ಯಾಯಾಧೀಶರಾದ ವಿದ್ಯಾಧರ ಶಿರಹಟ್ಟಿ, ಸೇರಿದಂತೆ ಇತರೆ ನ್ಯಾಯಾಧೀಶರು, ಇತರರು ಉಪಸ್ಥಿತರಿದ್ದರು.

## ಇಂದು ಶಿಶುಕ್ಷ ಮೇಳ, ಉದ್ಯೋಗ ನೇಮಕಾತಿಗೆ ಕ್ಯಾಂಪಸ್ ಸಂದರ್ಶನ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನವೆಂಬರ್ 28ರಂದು ಬೆಳಿಗ್ಗೆ 9 ಗಂಟೆಗೆ ಶಿಶುಕ್ಷ ಮೇಳ, ಉದ್ಯೋಗ ನೇಮಕಾತಿಗೆ ಕ್ಯಾಂಪಸ್ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಬಳ್ಳಾರಿ ತೋರಣಗಲ್ ಜೆ.ಎಸ್.ಡಬ್ಲ್ಯೂ ಸಹಯೋಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೈಗಾರಿಕಾ ಕಂಪನಿಗಳು ಬಾಗವಹಿಸಲಿದ್ದು, ಎಲೆಕ್ಟ್ರಿಷಿಯನ್, ಪಿಟ್ಟರ್, ಟರ್ನರ್, ವೆಲ್ಡರ್ ಮತ್ತು ಅಡ್ವಾನ್ಸ್ಡ ಸಿ.ಎನ್.ಸಿ (ಮಷಿನಿಂಗ್ ಟೆಕ್ನಿಷಿಯನ್) ವೃತ್ತಿಯ ತರಬೇತಾರ್ಥಿಗಳು ಈ ಅವಕಾಶದ ಸದುಪಯೋಗಪಡಿಸಿಕೊಳ್ಳಬೇಕು.

ಈ ಸಂದರ್ಶನದಲ್ಲಿ ಪಾಲ್ಗೊಳ್ಳಲು ಅಭ್ಯರ್ಥಿಗಳು 50 ಕೆ.ಜಿ ಸಾಮಾನ್ಯ ತೂಕ ಹಾಗೂ 165ಸೆ.ಮಿ ಸಾಮಾನ್ಯ ಎತ್ತರ ಹೊಂದಿರಬೇಕು. ಮತ್ತು ಮೂಲ ದಾಖಲಾತಿಗಳಾದ ರೆಸ್ಯೂಮ್, ಪೋಟೋ, ಮಾರ್ಕ್ಸ್ ಕಾರ್ಡ್, ಎನ್.ಟಿ.ಸಿ ಮತ್ತು 2 ಝುರಾಕ್ಸ್ ಪ್ರತಿಗಳೊಂದಿಗೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು, (ಟಣಕನಕಲ್, ಕುಷ್ಟಗಿ ರಸ್ತೆ, ಕೊಪ್ಪಳ) ಮೊಬೈಲ್ ಸಂಖ್ಯೆ: 9448813422, 9742532353, 9945577155, 9945672606, 9008536895 ಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಾಚಾರ್ಯರಾದ ಗವಿಶಂಕರ್ ಕೆ ತಿಳಿಸಿದ್ದಾರೆ

## ವಿಕಲಚೇತನರಿಗೂ ಸಮಾನ ಅವಕಾಶ ಕಲ್ಪಿಸಿ

**ಮೊದಲ ಪುಟದಿಂದ**

ಬಗಲುಗೋಲು ಓಟ. ದೃಷ್ಟಿದೋಷವುಳ್ಳವರಿಗೆ ಕೇನ್ ರೇಸ್, ಗುಂಡು ಎಸೆತ. ಶ್ರವಣ ದೋಷವುಳ್ಳವರಿಗೆ 100 ಮೀಟರ್ ಓಟ, ಗುಂಡು ಎಸೆತ, ರಿಂಗ್ ಎಸೆತ. ಬುದ್ಧಿಮಾಂದ್ಯರಿಗೆ ಮ್ಯೂಜಿಕಲ್ ಚೇರ್ ಮತ್ತು ಚೆಂಡು ಎಸೆತ. ಮತ್ತು ಗುಂಪು ಕ್ರೀಡೆಗಳಲ್ಲಿ ಸ್ಟಾಂಡಿಂಗ್ ಹಾಗೂ ಸಿಟ್ಟಿಂಗ್ ಕ್ರಿಕೇಟ್, ಕಬ್ಬಡ್ಡಿ ಸ್ಪರ್ಧೆಯನ್ನ ಮತ್ತು ಜಾನಪದ ಗೀತೆ, ಭಾವ ಗೀತೆ, ಚಿತ್ರಕಲಾ ಸ್ಪರ್ಧೆ, ಹಾಗೂ ಪ್ಯಾನ್ಸಿ ಡ್ರೆಸ್ (ವೇಷ ಭೂಷಣ) ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವಿನಾಶ್ ಲಿಂಗ .ಎಸ್ ಕೊಟಕಿಂಡಿ, ದೈಹಿಕ ಶಿಕ್ಷಣ ಮುಖ್ಯಸ್ಥರಾದ ಮಂಜುನಾಥ, ಭೂಮಿಕಾ ಟ್ರಸ್ಟ್ ಅಧ್ಯಕ್ಷ ಗಂಗಾಧರ ಹಾಗೂ ವಿವಿಧ ಸಂಘ–ಸಂಸ್ಥೆಗಳ ಅಧ್ಯಕ್ಷರು, ವಿಕಲಚೇತನರು ಉಪಸ್ಥಿತರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ
ನಿಧನ – ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ರಿಟರ್ನಿಂಗ್ ಆಫೀಸರ್,
ಹರಪನಹಳ್ಳಿ ತಾಲೂಕು ಪ್ರಾಥಮಿಕ ಶಾಲಾ
ಶಿಕ್ಷಕ/ಶಿಕ್ಷಕಿಯರ ಪತ್ತಿನ ಸಹಕಾರ ಸಂಘ ನಿ., ಹರಪನಹಳ್ಳಿ.
ಹರಪನಹಳ್ಳಿ ತಾಲೂಕು. ವಿಜಯನಗರ ಜಿಲ್ಲೆ.
ಚುನಾವಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು.
ಕಲಬುರಗಿ ಪ್ರಾಂತ. ಕಲಬುರಗಿ ಇವರ ಆದೇಶ ಸಂಖ್ಯೆ: ಜಂನಿಕ/ಬಿ–8/ಚುನಾವಣೆ/ ರಿಸೇ/ಬಿ.ಇ/2024–25. ದಿನಾಂಕ 12/8/2024 ರನ್ವಯ ಚುನಾವಣಾ ಪ್ರಕಟಣೆ

**ನಮೂನೆ-XII (ನಿಯಮ 14(3)ರನ್ವಯ) ಚುನಾವಣಾ ನೋಟೀಸ್.**

ಹರಪನಹಳ್ಳಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕ/ಶಿಕ್ಷಕಿಯರ ಪತ್ತಿನ ಸಹಕಾರ ಸಂಘ ನಿ., ಹರಪನಹಳ್ಳಿ, ಇದರ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಸಾಮಾನ್ಯ ಚುನಾವಣೆಯು ಈ ಕೆಳಗೆ ಕಾಣಿಸಿದ ಸಾಮಾನ್ಯ ಹಾಗೂ ಮೀಸಲಿರಿಸಿದ ಮತ ಕ್ಷೇತ್ರಗಳಿಗೆ **ದಿನಾಂಕ: 14.12.2024 ಶನಿವಾರದಂದು ಬೆಳಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆವರೆಗೆ, ಹರಪನಹಳ್ಳಿಯಲ್ಲಿನ ಹೊಸಪೇಟೆ ರಸ್ತೆಯಲ್ಲಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ,** ಇಲ್ಲಿ ನಡೆಸಲಾಗುವುದೆಂದು ನೋಟೀಸ್ ನೀಡಲಾಗಿದೆ.

**ಕ್ರ.ಸ.ಸಂ.ಗಳ ಅಧಿನಿಯಮ 1959 ಪ್ರಕರಣ 28–ಎ (2)(i)(ಎ)& (3) ರನ್ವಯ ಚುನಾಯಿಸಬೇಕಾದ ಒಟ್ಟು ನಿರ್ದೇಶಕರ ಸಂಖ್ಯೆ 15, ಸಾಮಾನ್ಯ 09, ಪ.ಜಾ.01, ಪ.ಪಂ. 01, ಮಹಿಳೆ 02, ಹಿಂ.ವ. ಅ. 2 ಸ್ಥಾನಗಳು.**

ಆಕಾಂಕ್ಷಿವುಳ್ಳ ಅಭ್ಯರ್ಥಿಗಳಿಂದ ನಾಮಪತ್ರವನ್ನು ದಿನಾಂಕ:30.11.2024ರಿಂದ 06.12.2024ರ ಶುಕ್ರವಾರ ಮ.3 ಗಂಟೆವರೆಗೆ ಸ್ವೀಕರಿಸಲಾಗುವುದು. ದಿ. 07.12.2024ಂದು ನಾಮಪತ್ರಗಳ ಪರಿಶೀಲನೆ, 07.12.2024ರಂದು ಪ್ರಕಟಣೆ, 08.12.2024ರಂದು ನಾಮಪತ್ರ ಹಿಂದಕ್ಕೆ ಪಡೆಯಲು ಕೊನೆ ದಿನವಾಗಿರುತ್ತದೆ. ಅದೇ ದಿನ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. 10.12.2024ರಂದು ಚಿಹ್ನೆಯೊಂದಿಗೆ ಅಧಿಕೃತ ಅಭ್ಯರ್ಥಿಗಳ ಪಟ್ಟಿ ಪ್ರಕಟ. 14.12.2024ರಂದು ಬೆ.9ರಿಂದ ಸಂಜೆ 4ರವರೆಗೆ ಮತದಾನ, ನಂತರದಲ್ಲಿ ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟಿಸಲಾಗುವುದು.

ಸಹಿ/– ರಿಟರ್ನಿಂಗ್ ಆಫೀಸರ್,
ಹರಪನಹಳ್ಳಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕ/ಶಿಕ್ಷಕಿಯರ ಪತ್ತಿನ ಸಹಕಾರ ಸಂಘ ನಿ., ಹರಪನಹಳ್ಳಿ ಹಾಗೂ ಸ.ಸಂ.ನಿ. ನಿರೀಕ್ಷಕರು, ಹರಪನಹಳ್ಳಿ.

ದಿನಾಂಕ: 26.11.2024
ಸ್ಥಳ: ಹರಪನಹಳ್ಳಿ.

## ಸಂವಿಧಾನದ ಅರಿವು ಹೆಚ್ಚಿಸಲು ದಿನಾಚರಣೆ

**ಹಂಪಿ ಟೈಮ್ಸ್ ಕೊಪ್ಪಳ**

ಸಂವಿಧಾನ ದಿನ ನವೆಂಬರ್ 26ರ ಪ್ರಯುಕ್ತ ಗಿಣಿಗೇರಾ ಗ್ರಾಮ ಪಂಚಾಯತಿ ಹಾಗೂ ಕೆರೆ ಅಭಿವೃದ್ಧಿ ಸಮಿತಿ ವತಿಯಿಂದ ಗಿಣಿಗೇರಾ ಗ್ರಾಮದ ಅಮೃತ ಸರೋವರ ದಡದಲ್ಲಿ ಮಂಗಳವಾರ ಸಂವಿಧಾನ ದಿನಾಚರಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಕುರಿತು ಮಾಜಿ ಜಿಲ್ಲಾ ಪಂಚಾಯತ ಸದಸ್ಯರಾದ ಗೂಳಪ್ಪ ಹಲಗೇರಿ ಮಾತನಾಡಿ ಡಾ.ಬಿ.ಆರ್.ಅಂಬೇಡ್ಕರ್ ರವರು ಸಮಾಜದಲ್ಲಿರುವ ಮೌಢ್ಯತೆಗಳನ್ನು ಹೊಡೆದೊಡಿಸಲು ಅವಿರತವಾಗಿ ಶ್ರಮಿಸಿದರು. ಭಾರತ ಸಂವಿಧಾನ ಕರಡು ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಸಮಾಜದಲ್ಲಿ ಅಸಮಾನತೆ, ಮೂಡನಂಭಿಕೆ ಇತ್ಯಾದಿಗಳನ್ನು ಶಾಶ್ವತವಾಗಿ ತೊಲಗಿಸಲು ಬರವಣಿಗೆಯ ರೂಪದಲ್ಲಿ ಭಾರತ ದೇಶದ ಸಂವಿಧಾನಕ್ಕೆ ದೊಡ್ಡ ಕೊಡುಗೆಯನ್ನು ನೀಡಿದ ಮಹಾನ್ ನಾಯಕರಾಗಿದ್ದಾರೆ.

ಕೆರೆ ಸಮಿತಿ ಅಧ್ಯಕ್ಷರಾದ ಸುಬ್ಬಣ್ಣಾಚಾರ್ ಮಾತನಾಡಿ, ದೇಶದ ಜನತೆಗೆ ಸಂವಿಧಾನದ ಬಗ್ಗೆ ಅರಿವು ಮೂಡಿಸಲು ಸಲುವಾಗಿ ಪ್ರತಿ ವರ್ಷ ಸಂವಿಧಾನ ದಿನವನ್ನು ಆಚರಣೆ ಮಾಡಲಾಗುತ್ತದೆ ಎಂದರು.

ಸಂವಿಧಾನ ಪೀಠಿಕೆಯನ್ನು ಕಾರ್ಯಕ್ರಮದಲ್ಲಿ ಬೋಧಿಸಲಾಯಿತು. ಈ ಸಂದರ್ಭದಲ್ಲಿ ಗಿಣಿಗೇರಾ ಗ್ರಾಮ ಪಂಚಾಯತಿ ಅಧ್ಯಕ್ಷರಾದ ರಂಜಿತಾ ಚವ್ಹಾಣ್, ಉಪಾಧ್ಯಕ್ಷರಾದ ಮಂಜುನಾಥ ಪಾಟೀಲ್, ಸದಸ್ಯರಾದ ಶಶಿಕಲಾ ಗೊಡಕಾರ್ ಇತರರಿದ್ದರು.

## ಡಿ. 15 ಕೊಪ್ಪಳ ತಾಲ್ಲೂಕು ಮಟ್ಟದ ಕೃಷಿಕ ಸಮಾಜದ ಚುನಾವಣೆ

**ಹಂಪಿ ಟೈಮ್ಸ್ ಕೊಪ್ಪಳ**

2024–25ನೇ ಸಾಲಿನ ಕೊಪ್ಪಳ ತಾಲ್ಲೂಕಿನ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ 5 ವರ್ಷಗಳ ಅವಧಿಗೆ ಕಾರ್ಯಕಾರಿ ಸಮಿತಿ ರಚನೆ ಹಾಗೂ ಪದಾಧಿಕಾರಿಗಳ ಆಯ್ಕೆಗೆ ಡಿಸೆಂಬರ್ 15ರಂದು ತಾಲ್ಲೂಕು ಮಟ್ಟದ ಕೃಷಿಕ ಸಮಾಜದ ಚುನಾವಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಜೀವನಸಾಬ ತಿಳಿಸಿದ್ದಾರೆ.

ಕೊಪ್ಪಳ ತಾಲ್ಲೂಕು ಕೃಷಿಕ ಸಮಾಜದ ಅಜೀವ ಸದಸ್ಯರ ಪಟ್ಟಿಯನ್ನು ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಹಾಗೂ ಹೋಬಳಿಯ ಮಟ್ಟದ ರೈತ ಸಂಪರ್ಕ ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರಕಟಿಸಿದೆ. ನವೆಂಬರ್ 30 ರಿಂದ ನಾಮಪತ್ರ ವಿತರಣೆ ಪ್ರಾರಂಭವಾಗಲಿದ್ದು, ಡಿಸೆಂಬರ್ 6ರ ಸಂಜೆ 5 ಗಂಟೆಯವರೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಡಿ.15ರ ಭಾನುವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಚುನಾವಣಾ ಪ್ರಕ್ರಿಯೆ ಜರುಗುವುದು.

ಹೆಚ್ಚಿನ ಮಾಹಿತಿಗಾಗಿ ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಬಂದು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com